BUDGET ESTIMATES FOR 1960-61 DEMANDS FOR GRANTS Nos. 23, 5, 25, and 26.

(Debate continued.)

ಶ್ರೀ ಎಚ್. ರಾಚಯ್ಯ (ವ್ಯವಸಾಯ, ಅಬ್ಕಾರಿ ಮತ್ತು ಸಮಾಜಕಲ್ಯಾಣ ಶಾಖೆಗಳ ಮಂತ್ರಿಗಳು). — ಸ್ವಾಮಿ, ದಿಮ್ಯಾಂಡ್ ನಂಬರ್ 23, 25.....

Sri C.J. MUCKANNAPPA (Gubbi).— Sir, yesterday you were pleased to tell usthat the reply by theGovernment also would be over yesterday.

ಅಧ್ಯಕ್ಷರು.—ತಾವು ಸಭೆ ಮುಗಿಯುವವರೆಗೆ ಇರಲಿಲ್ಲ. ಆದುದರಿಂದ ಕೊನೆಯಲ್ಲಿ ಏನಾಯಿ ತೆಂಬುದು ತಮಗೆ ಗೊತ್ತಾಗಿಲ್ಲ.

Sri C.J. MUCKANNAPPA.—We will take your word as sacred. But we would like to know why the programme was changed.

Mr. SPEAKER.— You were not presedt till the conclusion of the sitting when the programme was changed.

Sri C. J. MUCKANNAPPA.—What about the Demands relating to Civil Works and other demands put down for today?

Mr. SPEAKER.—The reply by the Government will go on up to 2 o'clock and thereafter we will take up the other demands.

Sri C. J. MUCKANNAPPA.— Then why not allow one or two more members to speak today?

Mr. SPEAKER.—That is not possible.

*ಶ್ರೀ ಎಚ್. ರಾಚಯ್ಯ.—ಸ್ವಾಮಿ, 23 ಮತ್ತು 25 ಈ ಎರಡು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಮಾನ್ಯ ಸದಸ್ಯರು ಭಾಷಣ ಮಾಡತಕ್ಕ ಕಾಲದಲ್ಲಿ ಕೆಲವಾರು ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವು ಟೀಕೆಗಳನ್ನೂ ಮಾಡಿದ್ದಾರೆ.

23ನೆಯ ಬೇಡಿಕೆಯಲ್ಲಿ ವ್ಯವಸಾಯ ಮತ್ತು ಮೀನುಗಾರಿಕೆ ಎರಡೂ ಇರುವ ಕಾರಣ ಮೊದಲು ಮೀನುಗಾರಿಕೆಯ ವಿಚಾರದಲ್ಲಿ ಮಾತನಾಡುತ್ತೇನೆ. ಕೆಲವಾರು ಸದಸ್ಯರು, ಅದರಲ್ಲಿಯೂ ಶ್ರೀಮಾಗಜಾನನ್ ಪಂಡಿತರು ಹೆಚ್ಚಿನ ರೀತಿಯಲ್ಲಿ ಮೀನು ಅಭಿವೃದ್ಧಿಯ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಸಲಹೆಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾದ ಆಸಕ್ತಿಯನ್ನುವಹಿಸಿದ್ದಾರೆ, ದೇಶದ ಆಹಾರದ ಕೊರತೆಯನ್ನು ನಿವಾರಿಸುವ ಮೂಲ ದೃಷ್ಟಿಯಿಂದ ಹೆಚ್ಚಿನ ಶ್ರದ್ಧೆಯನ್ನುವಹಿಸಿ ಈ ವಿಚಾರದತ್ತ ಗಮನ ಕೊಟ್ಟಿದ್ದಾರೆ. ಹೊಸ ಮೈಸೂರು ರಾಜ್ಯವಾದ ಮೇಲೆ 200 ಮೈಲಿಯಷ್ಟು ಕರಾವಳಿ ಪ್ರದೇಶ ನಮಗೆ ಸೇರಿತು. ಇದರಿಂದ ಇಡಿಯ ಭಾರತದಲ್ಲಿ ಹದಿನೈದರಲ್ಲಿ ಒಂದು ಭಾಗದಷ್ಟು ಕರಾವಳಿ ಪ್ರದೇಶ ಸೇರಿರುವುದರಿಂದ ಮೀನುಗಾರಿಕೆಯನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ.

ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಒಂದು ಲಕ್ಷಟನ್ ಅಷ್ಟನ್ನು ನಾವು ಉತ್ಪಾದನೆ ಮಾಡಿ ಹಂಚಬೇಕು ಎಂದು ಇದ್ದೇವೆ. ಇದನ್ನು ಒಂದು ಲಕ್ಷ 33 ಸಾವಿರ ಟನ್ನಿಗೆ? ಹೆಚ್ಚಿಸಬೇಕೆಂಬ ನಿರ್ದಿಷ್ಟವಾದ ಮಟ್ಟವನ್ನು ಇಟ್ಟು ಕೊಂಡಿದ್ದೇವೆ. ಆದುದರಿಂದ ಈ ಒಂದು ಗುರಿಯನ್ನು ಮುಟ್ಟಬೇಕಾದರೆ ಏನೇನು ಅನುಕೂಲಗಳನ್ನು ಕಳೆದವರ್ಷದಲ್ಲಿ ಮಾಡಿದ್ದೇವೆಂದು ಹೇಳುತ್ತೇನೆ. Staff for development of fisheries in inland area ಇದನ್ನು ಸಾಕಾರದಷ್ಟು ಮಾಡಿದ್ದೇವೆ. ಕಳೆದ ವರ್ಷ ಹೊಳೆನರಸೀಪುರ, ಚಿಕ್ಕಮಗಳೂರು, ಗುಬ್ಬಿ ಮುಂತಾದ ಜಾಯಂ ಆಗಿ ನೀರಿನ ವಸತಿ ಇರುವ ಕಡೆ 14 ಡಿವಿಷನಗಳನ್ನು ಸಂಸ್ಥಾಪನೆ ಮಾಡಿದ್ದೇವೆ. ಚಾಲ್ತಿಸಾಲಿನಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಮಾಡುವ ದೃಷ್ಟಿಯಿಂದ ಮೈಸೂರು, ಹಾಸನ, ಚೆನ್ನರಾಯಪಟ್ಟಣ, ಚಿಕ್ಕಬಳ್ಳಾಪುರ, ರಾಯಚೂರು, ಬಿಜಾಪುರಗಳಲ್ಲಿ ಆರು ಡಿವಿಷ್ಣಗಳನ್ನು ಸಂಸ್ಥಾಪನೆ ಮಾಡಬೇಕೆಂಬ ಯೋಜನೆಯನ್ನಿಟ್ಟುಕೊಂಡಿದ್ದೇವೆ. ಅಂಕಿ ಅಂಶಗಳ ಸಂಗ್ರಹಣಕ್ಕಾಗಿ ಈಗಾಗಲೇ ಎರಡು statistical unitsನ್ನು ಕಳೆದವರ್ಷ ಏರ್ಪಾಡು ಮಾಡಿದ್ದೇವೆ. ಈ ವರ್ಷವೂ ಕೂಡ ಎರಡು ಯೂನಿಟ್‌ಗಳನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಅದೇ ರೀತಿಯಲ್ಲಿ ಹೆಸರಘಟ್ಟದಲ್ಲಿ ಒಂದು research laboratory ಯನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಮುಂದಿನ ವರ್ಷ ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದಿದ್ದೇವೆ. ಕಳೆದ ವರ್ಷ ಮಂಗಳೂರು ಮತ್ತು ಕಾರವಾರಗಳಲ್ಲಿ boat building yards ಸಂಸ್ಥಾಪನೆ ಮಾಡಿದ್ದೇವೆ. ಈ ಕಾರ್ಯಾಚರಣೆಯನ್ನು ಮುಂದಿನ ವರ್ಷ ಹೆಚ್ಚಿನ ರೀತಿಯಲ್ಲಿ ಮುಂದುವರೆಸಬೇಕೆಂದಿದ್ದೇವೆ. ಇದಕ್ಕಾಗಿ ಮೀನುಗಾರಿಕೆಯನ್ನು ಅವಲಂಬಿಸಿರತಕ್ಕ Fisherman Community ಯವರಿಗೆ ನೈಲಾನ್ ನೆಟ್ಸ್ ಮತ್ತು ಬೇಕಾದ ಎಲ್ಲ ವಸ್ತುಗಳನ್ನು ಕೂಡ 1,70,000 ರೂಪಾಯಿ ಬೆಲೆ ಬಾಳುವ ಸಾಮಾನನ್ನು ಒದಗಿಸಿದ್ದೇವೆ ಮುಂದಿನ ವರ್ಷ 50 ಸಾವಿರ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಬೇಕೆಂದು ಅಂದಾಜು ಮಾಡಿಕೊಂಡಿದ್ದೇವೆ. ಈಗಾಗಲೇ ಮಂಗಳೂರಿನಲ್ಲಿ ಟ್ರೈನಿಂಗ್ ಸೆಂಟರ್ ಮಾಡಿ 57 ಜನ ಮೀನುಗಾರರನ್ನು ತರಬೇತು ಮಾಡಿದ್ದೇವೆ. ಮತ್ತು ಈ ವರ್ಷ 40 ಜನರನ್ನು ತರಬೇತು ಮಾಡಬೇಕೆಂದಿದ್ದೇವೆ. ಹಾಗೆಯೇ 240 ಲಕ್ಷ ಮಣ ಉಪ್ಪನ್ನು ಮೀನುಗಾರಿಕೆಗೋಸ್ಕರ ಒದಗಿಸಿದ್ದೇವೆ. ಮುಂದಿನ ವರ್ಷ ಒಂದು ಲಕ್ಷ ಮಣವನ್ನು ಒದಗಿಸುತ್ತೇವೆ. ಕಾರವಾರ, ಭಟ್ಕಳ್, ಕುಂದಾಪುರ, ಹಾನನ ಇಂಥಕಡೆಗಳಲ್ಲಿ Ice plant ಮತ್ತು cold storage ಗಳನ್ನು ಕಳೆದ ವರ್ಷ ಸ್ಥಾಪನೆ ಮಾಡಿದ್ದೇವೆ. ಮುಂದಿನ ಸಾಲಿನಲ್ಲಿ ಮುಲ್ಕಿ ಮತ್ತು ದಕ್ಷಿಣ ಕನ್ನಡ ಮತ್ತೊಂದು ಭಾಗದಲ್ಲಿ ಇವುಗಳನ್ನು ಸ್ಥಾಪನೆ ಮಾಡ

*Asterisk indicates that the remarks or speeches have not been revised by the member concerned.

ಬೇಕೆಂದಿದ್ದೇವೆ. ಕಳೆದ ವರ್ಷ ಮೂರು ಟ್ರಕ್ಸ್ ಒದಗಿಸಿದ್ದೇವೆ. ಈ ವರ್ಷ ಒಂದು ಟ್ರಕ್ ಒದಗಿಸಬೇಕೆಂದಿದ್ದೇವೆ. Fisheries Technological Research ಈಗಾಗಲೇ ಸ್ಥಾಪನೆ ಮಾಡಿದ್ದೇವೆ ಮತ್ತು Prawn Station Cultivation Centre ಅನ್ನು ಈಗಾಗಲೇ ಮಂಗಳೂರಿನಲ್ಲಿ ಸ್ಥಾಪನೆ ಮಾಡಿದ್ದೇವೆ. ಈ ರೀತಿಯಲ್ಲಿ ಬಹುಹೆಚ್ಚಿನ ಶ್ರದ್ಧೆಯಿಂದ ಮೀನುಗಾರಿಕೆಯ ವಿಚಾರದಲ್ಲಿ ಹೆಚ್ಚಿನ ಅನುಕೂಲಗಳನ್ನು ಕೊಟ್ಟಿದ್ದೇವೆ.

ಮೀನುಗಾರಿಕೆ ವಿಚಾರದಲ್ಲಿ ಹೇಳುವುದಾದರೆ ಸಮುದ್ರದಲ್ಲಿ ಮತ್ತು ಒಳಪ್ರದೇಶಗಳಲ್ಲಿರುವ ನೀರಿನಲ್ಲಿ ಉತ್ಪಾದನೆ ಮಾಡುತ್ತಿದ್ದೇವೆ. ಸಮುದ್ರದಲ್ಲಿರುವ ಮೀನನ್ನು ಉತ್ಪಾದನೆ ಮಾಡಬೇಕಾಗಿಲ್ಲ; ಹಿಡಿಯಬೇಕಾಗಿದೆ. ಸಮುದ್ರದಲ್ಲಿರುವ ಮೀನನ್ನು ಶೇಖರಣೆ ಮಾಡಬೇಕಾದರೆ ತರಬೇತಾಗಿರತಕ್ಕ ಜನಬೇಕು. ಆದುದರಿಂದಲೇ ಕಳೆದ ಮೂರು ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರಿಕೆಯ ವಿಚಾರದಲ್ಲಿ ವಿದ್ಯಾವಂತರನ್ನು ತರಬೇತು ಮಾಡಿದ್ದೇವೆ. ಮತ್ತು ಈಗಲೂ ಕೂಡ ಮಾಡುತ್ತಿದ್ದೇವೆ. ಇದೇ ರೀತಿಯಲ್ಲಿ Inland Fisheries ಅಭಿವೃದ್ಧಿ ಮಾಡಬೇಕಾದರೆ ಆ ಕಸಬಿನಲ್ಲಿ ತರಬೇತಾಗಿರತಕ್ಕ ಜನ ಬೇಕಾಗಿದೆ. ಆ ಒಂದು ಕಾರಣದಿಂದ ನಾವು ಹೆಚ್ಚಿನ ರೀತಿಯಲ್ಲಿ ಸುಮಾರು 27 ಶಾಲೆಗಳನ್ನು ತೆರೆದು fisherman communityಯವರ ಮಕ್ಕಳಿಗೆ ತರಬೇತು ಕೊಡುತ್ತಿದ್ದೇವೆ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸವನ್ನು ಕೊಡುವುದರ ಜೊತೆಗೆ ಮೀನುಗಾರಿಕೆಯಲ್ಲಿ ವಿಶೇಷವಾದ ತರಬೇತಿಯನ್ನು ಕೊಡುತ್ತಿದ್ದೇವೆ. ಅವರಿಗೆ ಬೇಕಾದಂಥ ಎಲ್ಲ ಸಾಮಾನುಗಳನ್ನೂ ನಮ್ಮ ಇಲಾಖೆಯಿಂದಲೇ ಒದಗಿಸಿ ಆ ಶಾಲೆಗಳ ಆಡಳಿತವನ್ನು ನಮ್ಮ ಇಲಾಖೆಯಿಂದಲೇ ನೋಡುತ್ತಿರುವುದರಿಂದ, ಈ ವಿಚಾರಕ್ಕೆ ನಾವು ಎಷ್ಟುಸಿಗಾ ಕೊಡಬೇಕಾಗಿತ್ತೋ ಅದಕ್ಕಿಂತಲೂ ಹೆಚ್ಚಿನ ನಿಗಾಕೊಟ್ಟಿದ್ದೇವೆ; ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಡುತ್ತೇವೆ.

Deep Sea Fishing ಮಾಡಬೇಕಾದರೆ mechanised boats ಕೊಡಬೇಕಾಗುತ್ತದೆ. ಕಳೆದ ಎರಡು ವರ್ಷಗಳಲ್ಲಿ 25ಕ್ಕಿಂತಲೂ ಹೆಚ್ಚು mechanised boats ಕೊಟ್ಟಿದ್ದೇವೆ. ಅಗಲೇ ಹೇಳಿದಂತೆ ಮಂಗಳೂರು ಮತ್ತು ಕಾರವಾರಗಳಲ್ಲಿರುವ ದೋಣಿಗಳನ್ನು ಕಟ್ಟುತಕ್ಕ boat building yards ಚೆನ್ನಾಗಿ ಕೆಲಸ ಮಾಡುತ್ತಿವೆ. ಇತರ ದೇಶಗಳಿಗೆ ಕೂಡ ಈಗಾಗಲೇ ಕೆಲವರನ್ನು ತರಹೇತಿಗಾಗಿ ಕಳಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟ ಡೈರೆಕ್ಟರನ್ನು ಜಪಾನ್ ದೇಶಕ್ಕೆ ಕಳಿಸಲಾಗಿತ್ತು. ಆಧುನಿಕ ರೀತಿಯ ಮೀನುಗಾರಿಕೆಯ ವಿಚಾರದಲ್ಲಿ ಹೆಚ್ಚಿನ ಪರಿಶ್ರಮವನ್ನು ಹೊಂದಿ ಅವರು ಹಿಂತಿರುಗಿದ್ದಾರೆ. ಈ ರೀತಿಯಾಗಿ ಮೀನುಗಾರಿಕೆಯಲ್ಲಿ ಇಲಾಖೆಯವರು ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ; ಇಷ್ಟು ಮಾತ್ರ ಹೇಳಿ ಚಾಲ್ತಿಸಾಲಿನಲ್ಲಿ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನು ಹೆಚ್ಚಿನ ಗಮನ ಕೊಡುತ್ತೇವೆಂದು ಮಾತ್ರ ಮಾನ್ಯ ಸಭೆಗೆ ತಿಳಿಸುತ್ತೇನೆ. ಆದುದರಿಂದ ಈ ಇಲಾಖೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಅನುಮಾನವನ್ನು ವ್ಯಕ್ತಪಡಿಸಿದರೋ ಅದು ಸರಿಯಾದದ್ದಲ್ಲವೆಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

Sri S. D. KOTHAVALE (Chikodi).—What steps have been taken to supply nylon nets to the fisherman ?

ಶ್ರೀ ಎಚ್. ರಾಜಯ್ಯ.—ಈಗಾಗಲೇ ಒದಗಿಸುತ್ತಿದ್ದೇವೆ. ಈ ವರ್ಷವೂ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದಕ್ಕೆ ಪ್ರಯತ್ನಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಯಾವುದಾದರೂ ನಂದರ್ಭಗೊತ್ತಿದ್ದ ಪಕ್ಷದಲ್ಲಿ ತಿಳಿಸಿದರೆ ಕೂಡಲೇ ಕಳಿಸಿಕೊಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀಮತಿ ಚಂಪಾಬಾಯಿಯವರು ಸಹಕಾರ ಸಂಘಗಳಿಗೆ ಏನೂ ಅನುಮತಿಯನ್ನು ಕೊಡುವುದಿಲ್ಲವೆಂದು ಹೇಳಿದರು. ಮುಂಬೈ ಸರ್ಕಾರದಲ್ಲಿದ್ದಾಗ ಸಹಕಾರ ಸಂಘಕ್ಕೆ ಏನು ರಿಯಾಯಿತಿಯನ್ನು ಕೊಟ್ಟಿದ್ದರೋ ಅದೇ ರಿಯಾಯಿತಿಯನ್ನು ಹರಾಜುಹಾಕದೆ ಹರಿಜನಕ್ಕೋ ಆಪರೇಟಿವ್ ಸೊಸೈಟಿಗಳಿಗೆ ಕೊಡತಕ್ಕ ರಿಯಾಯಿತಿಯನ್ನು ತೋರಿಸಬೇಕೆಂದು ಆಜ್ಞೆ ಮಾಡಿದ್ದೇವೆ. ಅವರು ಹೇಳಿದ ರೀತಿಯಲ್ಲಿ ಯಾವ ವಿಧವಾದ ಅನುಮಾನಕ್ಕಾಗಲಿ, ಅನ್ಯಾಯಕ್ಕಾಗಲಿ, ಅವಕಾಶ ಕೊಟ್ಟಿಲ್ಲ, ಅವರು ಹೇಳಿದ್ದರಲ್ಲಿ ಆಷ್ಟೇನೂ ತಿರುಳಿಲ್ಲವೆಂದು ಮಾತ್ರ ಹೇಳುತ್ತೇನೆ.

ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಬಹು ಮುಖ್ಯವಾಗಿ ನಾನು ಸರ್ಕಾರದ ಧ್ಯೇಯ ಧೋರಣೆಗಳು ಏನು ಎನ್ನುವುದನ್ನು ವಿವರಣೆಮಾಡಲು ಇಚ್ಛಿಸುತ್ತೇನೆ. ಮಾನ್ಯ ಸದಸ್ಯರು ಭಾಷಣಮಾಡುವಾಗ ಸರ್ಕಾರ ಈ ರೀತಿ ತನ್ನ ಪ್ರಯತ್ನದಲ್ಲಿ ನಿಜವಾಗಿಯೂ ಯಶಸ್ವಿಯಾಗಿಲ್ಲ ಎಂದು ಹೇಳುವಾಗ ಯಾರಾದರೂ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದರೆ ಚೆನ್ನಾಗಿತ್ತು. ಉದಾಹರಣೆಗೆ ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿಯನ್ನು ಸುಧಾರಿಸಬೇಕು ಎನ್ನುವುದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ತಿಳಿದುಕೊಂಡಿವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಟಾರ್ಜೆಟ್ ಪಡೆಯಬೇಕಾಗಿತ್ತು ಎಂದರೆ 5·1 ಲಕ್ಷ ಟನ್ ಆಹಾರೋತ್ಪಾದನೆಯನ್ನು ಮಾಡಬೇಕಾಗಿತ್ತು. ನಾವು ಈಗಾಗಲೇ ಆರು ಲಕ್ಷ ಟನ್‌ಗಿಂತಲೂ ಹೆಚ್ಚಿಗೆ ಆಹಾರೋತ್ಪಾದನೆಯನ್ನು ನಾಲ್ಕು ವರ್ಷಗಳಲ್ಲಿ ಮಾಡಿದ್ದೇವೆ. ಸಾಕಾದಷ್ಟು ರೀತಿಯಲ್ಲಿ ರೈತರಿಗೆ ಬೇಕಾದಂಥ ಹಣ ಸಹಾಯ, ನೀರಿನ ಸರಬರಾಯಿ, ಮತ್ತು ವ್ಯವಸಾಯಕ್ಕೆ ಬೇಕಾದಂಥ ಗೊಬ್ಬರ, ಕಬ್ಬಿಣ ಮುಂತಾದುವುಗಳನ್ನು ಒದಗಿಸುವ ವಿಚಾರದಲ್ಲಿಯೂ, ಹಾಗೆಯೇ, ಟ್ರ್ಯಾಕ್ಟರುಗಳನ್ನೂ ಮತ್ತು ಬುಲ್ಡೋಜರುಗಳನ್ನೂ ಸಾಕಷ್ಟು ರೀತಿಯಲ್ಲಿ ಒದಗಿಸದಿದ್ದರೆ ನಾಲ್ಕು ವರ್ಷಗಳಲ್ಲೇ ನಾವು ಇಷ್ಟು ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ. ಸತ್ಯಾಂಶ ಹೀಗಿರುವಲ್ಲಿ, ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ, ನಮ್ಮ ಸರ್ಕಾರದವರು ಆ ಪ್ರಯತ್ನದಲ್ಲಿ ವಿಫಲರಾಗಿದ್ದಾರೆ, ಇದು ನಾಚಿಕೆ ಗೇಡು ಎಂದು ಶ್ರೀ ಚಾಮಯ್ಯನವರು ಹೇಳಿದರು. ಇದಕ್ಕೆ ನಾನು ಏನು ಉತ್ತರ ಕೊಡುವುದು?

ಶ್ರೀ ಸಿ.ಕೆ.ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ವ್ಯವಸಾಯದ ಬಗ್ಗೆ ಬಡ್ಜೆಟ್ಟಿನಲ್ಲಿ ಒದಗಿಸಿದ್ದ ಹಣ ಉಳಿತಾಯವಾಗಿದೆ, ಟಾರ್‌ಜೆಟ್ ರೀಚ್ ಆಗಿದೆ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಎಚ್. ರಾಜಯ್ಯ.—ಹಣವನ್ನು ಒದಗಿಸುವಾಗ ವಿತರಣೆಮಾಡಿ ಆ ಒಂದು ಬಾಬಿಗೆ ಎಷ್ಟು ನಾವು ಖರ್ಚುಮಾಡಬೇಕೋ ಅಷ್ಟು ಮಾತ್ರ ಖರ್ಚುಮಾಡಿರುವುದರಿಂದ ನಮಗೆ ಈ ಟಾರ್ಜೆಟ್ಟಿನ ಬೆಲೆ ಸಿಕ್ಕುತ್ತದೆ. ವ್ಯವಸಾಯದ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೆಚ್ಚಿಗೆ ಮಾಡಿ ಆಹಾರದ ಉತ್ಪಾದನೆಯನ್ನು ಮಾಡಬೇಕಾದರೆ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣಕ್ಕಿಂತಲೂ ಹೆಚ್ಚಿಗೆ

(ಶ್ರೀ ಎನ್. ರಾಚಯ್ಯ)

ಹಣಬೇಕಾಗಿದ್ದರೆ ಸಪ್ಲಿಮೆಂಟರಿ ಗ್ರ್ಯಾಂಟ್ ಎಷ್ಟೋ ನಂದರ್ಭದಲ್ಲಿ ತೆಗೆದುಕೊಂಡಿದ್ದೇವೆ. ಹಣಕಾಸಿನ ಮಂತ್ರಿಗಳಿಗಾಗಲ ನನಗಾಗಲೆ ಈ ವಿಚಾರ ದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಿ ಖರ್ಚುಮಾಡುತ್ತಿದ್ದೇವೆ. ಕೆಲವು ಬಾಬಿನಲ್ಲಿ ಹಣ ಉಳಿತಾಯ ಕಾಣುವುದಕ್ಕೆ ಕಾರಣ ಇದೆ. ಕೆಲವು ಸೀಡ್ ಫಾರಮ್ಸ್ ಸ್ಥಾಪನೆ ಮಾಡುವುದರಲ್ಲಿ ಹಣ ನಿಗದಿ ಮಾಡಿರುತ್ತೇವೆ. ಆದರೆ ಜಾಗ ಅಕ್ವೈರ್ ಆಗಬೇಕಾದ ನಂದರ್ಭದಲ್ಲಿ ತಡ ವಾಗಿ ಹಣ ಉಳಿತಾಯವಾಗುತ್ತದೆ. ಮತ್ತು ಕೆಲವು ಕಟ್ಟಡಗಳು ಆಗ ಬೇಕಾದರೆ,...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಹಳ ಬುದ್ಧಿವಂತಿಕೆ ಯಿಂದ ಹಣವನ್ನು ಖರ್ಚುಮಾಡಿದ್ದೇವೆ. ಐದು ವರ್ಷ ಗಳಲ್ಲಿ ನಾವು ಏನು ಸಾಧನೆ ಮಾಡಬೇಕಾಗಿತ್ತೋ ಅದಕ್ಕಿಂತಲೂ ಇನ್ನೂ ಹೆಚ್ಚಿಗೆ ನಾಲ್ಕು ವರ್ಷಗಳಲ್ಲಿ ಸಾಧನೆ ಮಾಡಿದ್ದೇವೆ ಎಂದು ಹೇಳಿದಿರಿ, ಹಾಗಾದರೆ ನೀವು ಎಷ್ಟು ಟನ್ ಆಹಾರವನ್ನು ಹೊರಗಡೆಯಿಂದ ಅಮದು ಮಾಡಿದ್ದೀರಿ ?

ಶ್ರೀ ಎಚ್. ರಾಚಯ್ಯ.—ಒಬ್ಬರಿಗೆ 16 ಔನ್ಸ್ ಪ್ರಕಾರ ಆಹಾರವನ್ನು ಒದಗಿಸಬೇಕಾದರೆ ಅಂದಾಜು ಪ್ರಕಾರ 37 ಲಕ್ಷ ಟನ್ ಆಹಾರ ಬೇಕಾಗುತ್ತದೆ. 10–12 ಔನ್ಸ್ ಆಹಾರವನ್ನು ಒದಗಿಸಬೇಕಾದರೆ, ಬೇಕಾಗುವ ಧಾನ್ಯ ಈಗಾಗಲೇ ಸಾಕಾದಷ್ಟು ನಮ್ಮ ರಾಜ್ಯದಲ್ಲಿ ರಾಗಿ, ಜೋಳ ಮುಂತಾದುವು ಗಳನ್ನು ಬೆಳೆಯುತ್ತಿದ್ದಾರೆ. ಅವುಗಳ ಸ್ವಾವಲಂಬನೆ ನಮಗೆ ಇದೆ. ಆದರೆ ಬತ್ತ ಬೆಳೆಯ ತಕ್ಕಷ್ಟು ಸ್ವಲ್ಪ ಮಾತು ಡಿಫಿಷಿಟ್ ಇದೆ. ಮಾನ್ಯ ನದನ್ಯರಿಗೆ ಗೊತ್ತಿರು ವಹಾಗೆ ತುಂಗಭದ್ರಾ ಪ್ರಾಜೆಕ್ಟ್ ನುಗುಪ್ರಾಜೆಕ್ಟ್ ತುಂಗಾಜಲಾಶಯ ಮುಂತಾದುವುಗಳನ್ನು ಕಟ್ಟಿದ್ದೇವೆ ಮತ್ತು ತಮಗೆಲ್ಲರಿಗೂ ತಿಳಿದಿರುವಹಾಗೆ ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶದಲ್ಲಿ ರೈತರು ಯಾರಾದರೂ ವ್ಯವಸಾಯ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಬೇಕಾದ, ನಕಲ ಸೌಕರ್ಯಗಳನ್ನೂ ಸರ್ಕಾ ರದವರು ಒದಗಿಸಿಕೊಡುತ್ತಾರೆ. ಆಹಾರವನ್ನು ಬೆಳೆ ಯಿರಿ ಎಂದು ಹೇಳುತ್ತಿದ್ದೇವೆ, ಆದರೆ ರೈತರು ಯಾತೂ ಮುಂದೆ ಬರುತ್ತಿಲ್ಲ. ನುಮ್ಮನೆ ಸರ್ಕಾರ ವನ್ನು ಆಕ್ಷೇಪಣೆ ಮಾಡತಕ್ಕದ್ದು ಸರಿಯಲ್ಲ. ನಮ್ಮ ದೇಶ, ರಷ್ಯ, ಚೈನಾ ದೇಶ ಇದ್ದಹಾಗೆ ಇಲ್ಲ. ಭೂಮಿ ಇನ್ನೊಬ್ಬರ ಮಾಲಕತ್ವದಲ್ಲಿ ಇದೆ. ನಮ್ಮಲ್ಲಿ ರೈತರೇ ಭೂಮಾಲೀಕರಾಗಿದ್ದಾರೆ. ಅವರಿಗೆ ಬೇಕಾದಂಥ ಹಣವನ್ನು ಸಾಲದರೂಪದಲ್ಲಿ ಕೊಡುವುದು, ಕೋ-ಆಪ ರೇಟಿವ್ ಸೊಸೈಟಿಗಳಲ್ಲಿ, ರಿಜರ್ವ್ ಬ್ಯಾಂಕುಗಳಲ್ಲಿ ಮತ್ತು ಮೈಸೂರು ಬ್ಯಾಂಕುಗಳಲ್ಲಿ ರೈತರಿಗೆ ಹಣ ವನ್ನು ಸಾಲದರೂಪದಲ್ಲಿ ಕೊಡಲು ವ್ಯವಸ್ಥೆಯನ್ನು ಮಾಡಿದ್ದೇವೆ. ನಾನು ಈಗ 9-10 ತಿಂಗಳುಗಳಿಂದ ಈ ವ್ಯವನಾಯ ಖಾತೆಯ ಮಂತ್ರಿಯಾಗಿದ್ದೇನೆ. ಇದು ವರೆಗೂ ತನಗೆ ಹಣನಹಾಯ ಸಿಕ್ಕಲಿಲ್ಲ, ತೊಂದರೆ ಯಾಗಿದೆ ಎಂದು ಯಾವ ರೈತನಿಂದಲೂ ದೂರು ಬಂದಿಲ್ಲ. ವ್ಯವಸಾಯದ ಕ್ಷೇತ್ರದಲ್ಲಿ ರೈತರಿಗೆ ಏನೇನು ಅನನುಕೂಲಗಳು ಇವೆಯೋ ಅಂಥಾವನ್ನು ನರಿಪಡಿನು ವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆಹಾರದ ಉತ್ಪಾದನೆಯನ್ನು ಹೆಚ್ಚಾಗಿ ಮಾಡಬೇಕು ಎಂದು ಮನಸ್ಸಿನಲ್ಲಿ ಇಟ್ಟುಕೊಂಡು ರೈತರಿಗೆ ಹಣ ವನ್ನು ಸಾಲದ ರೂಪದಲ್ಲಿ ಒದಗಿನುವ ಏರ್ಪಾಡನ್ನು ಮಾಡಿದ್ದೇವೆ. ನೀರಾವರಿಗಾಗಿ ನಮ್ಮ ಬಜೆಟ್ಟಿನಲ್ಲಿ ಎಲ್ಲಾ ಶಾಖೆಗಳಿಗಿಂತಲೂ ಹೆಚ್ಚು ಹಣವನ್ನು ಒದಗಿಸಿ ದ್ದೇವೆ. ಆಹಾರದ ಉತ್ಪಾದನೆಗೋಸ್ಕರ ರೈತರ ಅಭಿವೃದ್ಧಿಯನ್ನು ಸಾಧಿಸಿದರೆ ಸಾಕು ಎಂದು, ಒಂದು ಹೆಚ್ಚಿನ ನೀರಾವರಿ ಸೌಕರ್ಯವನ್ನು ಅವರಿಗೆ ಒದಗಿ ನುವುದು ಅತ್ಯಗತ್ಯ ಎಂದು ಆ ವಿಷಯವನ್ನು ಮನಸ್ಸಿ ನಲ್ಲಿ ಇಟ್ಟುಕೊಂಡು ಸರ್ಕಾರದವರು ಬಜೆಟ್ಟಿನಲ್ಲಿ ಎಲ್ಲಾ ಶಾಖೆಗಳಿಗಿಂತಲೂ ನೀರಾವರಿ ಶಾಖೆಗೆ ಬಹು ಹೆಚ್ಚಿನ ಹಣವನ್ನು ಒದಗಿಸಿ ತಮ್ಮ ಮುಂಜೂರಾತಿ ಯನ್ನು ಪಡೆಯುವುದಕ್ಕೋಸ್ಕರ ಈಗ ತಾನೆ ತಮ್ಮ ಮುಂದೆ ಇಟ್ಟಿದ್ದೇವೆ. ಅದು ಇವೊತ್ತು ಸಾಯಂ ಕಾಲದ ವೇಳೆಗೆ ತಮಗೆ ಗೊತ್ತಾಗುತ್ತದೆ. ನೀರಾ ವರಿ ಸೌಕರ್ಯ ಒದಗಿನುವುದು ಅಷ್ಟೇ ಅಲ್ಲದೆ, ಹಣ ನಹಾಯ, ವ್ಯವಸಾಯಕ್ಕೆ ಬೇಕಾದ ಗೊಬ್ಬರ, ಕಬ್ಬಿಣ, ಇವುಗಳೆಲ್ಲವನ್ನೂ ಒದಗಿನುವ ಏರ್ಪಾಡನ್ನು ಮಾಡುತ್ತಿದ್ದೇವೆ.

Sri C. J. MUCKANNAPPA.—What is the extent of land under food crops? What is the acreage under areca gardens, sugar cane, and other commercial crops and what is the extent of land under ragi and paddy ?

ಶ್ರೀ ಎಚ್. ರಾಚಯ್ಯ.—ಸ್ವಾಮಿ, ನಂಸ್ಥಾನದಲ್ಲಿ ನುಮಾರು 200 ಲಕ್ಷ ಎಕರೆ ಜಮೀನು ಆಬಾದು ಆಗುವುದು ಇದೆ. ಈಗ 119 ಲಕ್ಷ ಎಕರೆ ಜಮೀನನ್ನು ಮಾತ್ರ ಆಬಾದು ಮಾಡಿರುವುದು. ಇನ್ನು ಉಳಿಕೆ ಯಾದ ಜಮೀನನ್ನು ಆಬಾದಿಗೆ ತರಬೇಕಾಗಿದೆ. ಪ್ರತಿ ವರ್ಷವೂ ಕೂಡ ಲಕ್ಷಾಂತರ ಎಕರೆ ಜಮೀನನ್ನು ಆಬಾದಿಗೆ ತರುತ್ತಿದ್ದೇವೆ. ಈಗ ನಮಗೆ ಬೇಕಾಗಿ ರತಕ್ಕಂಥ ಆಹಾರ ಪದಾರ್ಥಗಳ ವಿಷಯದಲ್ಲಿ ಇನು ಎರಡು ಮೂರು ವರ್ಷಗಳಲ್ಲಿ ಸ್ವಾವಲಂಬಿಗಳಾಗು ವುದಕ್ಕೆ ಅವಕಾಶವಿದೆ ಎಂದು ಮಾತ್ರ ನಾನು ಹೇಳುತ್ತೇನೆ. ಇನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಕಾಫೀಸೀಡ್ಸ್, ಹೊಗೆಸೊಪ್ಪು ಇತ್ಯಾದಿಗಳೆಲ್ಲವೂ ಪಟ್ಟಿಯಲ್ಲಿವೆ. ಅದರ ವಿವರಣೆಯನ್ನು ಹೇಳಬೇಕಾದರೆ ಬಹಳ ಕಾಲ ಬೇಕಾಗುತ್ತದೆ.

*Sri S. D. KOTHAVALE.—On a previous occasion, I had suggested the appointment of a Land Utilisation Survey Committee. Now the Hon'ble Minister was pleased to say that a certain acreage would be under tobacco crop. Now there are claims of the Forest Department, claims of the Muzrai Department, gomal, etc. In my opinion a committee is necessary to undertake a survey of the entire land and ascertain what area should be given or allotted to each crop and what area should be at the disposal of the various departments and what area should be available to others. For the purpose of securing such a co-ordination, I think such a survey is necessary. I wish to know the reaction of the Government to this view.

ಶ್ರೀ ಎಚ್. ರಾಚಯ್ಯ.—ಮಾನ್ಯ ಸದಸ್ಯರು ಕೊಟ್ಟಿರ ತಕ್ಕ ಸಲಹೆಯನ್ನು ಈಗಾಗಲೇ ಸರಕಾರದವರು ಯೋಚನೆ ಮಾಡಿದ್ದಾರೆ ಮತ್ತು ವ್ಯವಸಾಯದ ಅಭಿವೃದ್ಧಿಗಾಗಿ ಸಂಸ್ಥಾನದ ಮಟ್ಟದಲ್ಲಿ ಒಂದು ಅಗ್ರಿಕಲ್‌ಚರ್ ಆಡ್‌ವೈಸರಿ ಬೋರ್ಡು ಎಂದು ಮಾಡಲಾಗಿದೆ. ಈ ಬೋರ್ಡಿನವರು ಇವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ಸಾಧ್ಯವಾದರೆ ಇನ್ನು ಎರಡು ಮೂರು ತಿಂಗಳುಗಳೊಳಗಾಗಿ ಒಂದು ವರದಿಯನ್ನು ಕಳುಹಿಸ ಬೇಕೆಂದು ಕೇಳಿದ್ದೇವೆ. ಅದು ಬಂದಮೇಲೆ ಯಾವರೀತಿಯಲ್ಲಿ ಮಾಡಬಹುದು ಎಂಬುದನ್ನೆಲ್ಲಾ ಕೂಲಂಕಷವಾಗಿ ಮಾಡಬೇಕೆಂದು ಸರಕಾರದವರು ಉದ್ದೇಶಿಸಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

12-30 P.M.

ಮೀನುಗಾರಿಕೆಯ ವಿಚಾರದಲ್ಲಿ ಒಂದುವಿಷಯವನ್ನು ತಿಳಿಸಬೇಕಾಗಿದೆ. ಕೇಂದ್ರ ಸರಕಾರದವರ ಆದೇಶದಂತೆ ಈಗಾಗಲೇ ಸಂಸ್ಥಾನದಲ್ಲಿ ಫಿಷರಿ ಬೋರ್ಡು ಒಂದನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದರಿಂದ ಈ ಮೀನುಗಾರಿಕೆಯ ವಿಚಾರದಲ್ಲಿ ಹೆಚ್ಚಿನ ಗಮನವನ್ನು ಕೊಡಲು ಅನುಕೂಲವಾತ್ತದೆ ಮತ್ತು ಸೂಕ್ತವಾದ ಕಾರ್ಯಕ್ರಮವನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಈ ಬೋರ್ಡಿನಲ್ಲಿ 27 ಜನ ಸದಸ್ಯರಿರಬೇಕೆಂದು ಮತ್ತು ಈ ರೀತಿಯಾದ ಅಡ್‌ವೈಜರಿ ಬೋರ್ಡು ಇರಬೇಕೆಂದು ಈಗಾಗಲೇ ಆಜ್ಞೆ ಮಾಡಿದ್ದೇವೆ. ಇದು ಇವತ್ತೋ ನಾಳೆಯೋ ಹೊರಬೀಳಬಹುದು.

ವ್ಯವಸಾಯದ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾ ಮುಕ್ಯಣ್ಣಪ್ಪನವರು ಹೇಳಿದಹಾಗೆ ವಿವರವಾದ ಪಟ್ಟಿಯನ್ನು ಕ್ಯಾಷು ಕ್ರಾಪುಗಳ ಬಗ್ಗೆ ಮತ್ತು ಇನ್ನಿತರ ಬೆಳೆಗಳ ಬಗ್ಗೆ ಇರುವ ಪಟ್ಟಿಯನ್ನು ತಮ್ಮ ಮುಂದೆ ಇಟ್ಟಿದ್ದೇನೆ, ಮತ್ತು ಈಗಾಗಲೇ ವರದಿಗಳ ಮೂಲಕ ಇವೆಲ್ಲವನ್ನೂ ಒದಗಿಸಲಾಗಿದೆ. ವ್ಯವಸಾಯದ ಇಲಾಖೆಯನ್ನು ನೋಡಿದರೆ ಬಹಳ ಮುಂದಗಾಮಿಯಾಗಿ ಕೆಲಸ ಮಾಡತಕ್ಕ ಇಲಾಖೆಯಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನಮ್ಮ ದೇಶದಲ್ಲಿ ಇಲ್ಲಿಯ ತನಕ ವ್ಯವಸಾಯಕ್ಕಾಗಿ ಯಾವ ರೀತಿಯಾದ ಉತ್ತೇಜ ವಿದ್ದಿತೊ ಅದನ್ನೇ ಮುಂದುವರಿಸಿಕೊಂಡು ಇನ್ನೂ ಹೆಚ್ಚಿನ ಉತ್ತೇಜನ ಕೊಟ್ಟು ವ್ಯವಸಾಯವನ್ನು ಅಭಿವೃದ್ಧಿ ಮಾಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲು ಯೋಚಿಸಲಾಗಿದೆ ಮತ್ತು ಸರಕಾರಿ ಅಧಿಕಾರಿಗಳನ್ನು ಹೆಚ್ಚಿನ ಪರಿಶ್ರಮ ಹೊಂದಲು ತರಬೇತಿಗಾಗಿ ಪರದೇಶಗಳಿಗೆ ಕಳುಹಿಸಿ ಅದರಿಂದ ವ್ಯವಸಾಯವನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂದು ಯೋಚಿಸಲಾಗಿದೆ. ಮತ್ತು ಈ ವಿಚಾರದಲ್ಲಿ ರೈತರು ಕೂಡ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರಕಾರ ನೂರಕ್ಕೆ 80 ಭಾಗ ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿಬೇಕಾದರೆ Agriculture and Animal Husbandry Developmentನ ಬಗ್ಗೆ ನಾವು ಗಮನ ಕೊಡಬೇಕು. ಕೇಂದ್ರ ಸರಕಾರವೂ ಹೊಂದಿ ಇದೇ ಅಭಿಪ್ರಾಯವನ್ನು ಪಡೆದಿದ್ದಾರೆ. ಈ ಒಂದು ಕಾರಣದಿಂದ ರಾಷ್ಟ್ರೀಯ ವಿಸ್ತರಣಾ ಯೋಜನೆ ಯಶಸ್ವಿಯಾದ ಹಾಗೆಲ್ಲಾ ವ್ಯವಸಾಯವನ್ನು ಅಭಿವೃದ್ಧಿಮಾಡಿ ಇದರಿಂದ ಹೆಚ್ಚಿನ ಪ್ರತಿಫಲವನ್ನು ಹೆಚ್ಚು ಹೆಚ್ಚಾಗಿ ಸಾಧಿಸಲು ಅವಕಾಶ ವಿದೆ. ಇಪ್ಪೊತ್ತಿನ ದಿವಸ ಗ್ರಾಮಗಳಲ್ಲಿರುವ ರೈತರಿಗೆ ಹೆಚ್ಚಿನ ಜ್ಞಾನೋದಯವಾಗಿದೆ ಮತ್ತು ಉತ್ತೇಜನ ವಿದೆ ಎಂದು ಅವರು ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಹೀಗೆ ಕೆಲಸಮಾಡಲು ಸಾಕಾದಷ್ಟು ಉತ್ತೇಜನವನ್ನು ಸರಕಾರದ ಇಲಾಖೆಯವರು ಕೊಡುತ್ತಿದ್ದಾರೆ. ಇದನ್ನು ಉಪಯೋಗಿಸಿಕೊಂಡು ನಮ್ಮ ರೈತಬಾಂಧವರು ಬಹಳ ಮುಂದೆ ಬಂದಿದ್ದಾರೆ ಮತ್ತು ಇವಕ್ಕಾಗಿ ಎಲ್ಲಾ ಉತ್ತೇಜನವನ್ನೂ ಕೊಡುತ್ತಿದ್ದೇವೆ.

ಶ್ರೀಮಾನ್ ವೀರೇಗೌಡರು ಒಂದು ವಿಚಾರವನ್ನು ಹೇಳಿದರು. ವ್ಯವಸಾಯದಲ್ಲಿ ಪರಿಶ್ರಮವಿರುವ ಯುವಕ ರೈತರ ಸಂಘ ಮತ್ತು Young Farmers' Association, ಎಂಬ ಹೆಸರಿನ ಎರಡು ಸಂಸ್ಥೆಗಳಿವೆ. ಇವೆರಡು ಸಂಸ್ಥೆಗಳಿಂದ ಬಂದ ಸಲಹೆಯನ್ನು ಸರಕಾರ ಒಂದು ಮಟ್ಟದಲ್ಲಿ ಪರಿಶೀಲನೆ ಮಾಡುತ್ತದೆ. ಇವೆರಡು ಸಂಸ್ಥೆಗಳಿಗೂ ನಾನೇ ಅಧ್ಯಕ್ಷನಾಗಿದ್ದೇನೆ. ಸಾಮಾನ್ಯವಾಗಿ ಈ ಎರಡು ಸಂಸ್ಥೆಗಳೂ ಹೊಂದಿಕೊಂಡು ಕೆಲಸ ಮಾಡುತ್ತವೆ. ಮತ್ತು ಇವುಗಳಿಂದ ಬರುವ ಸಲಹೆಯನ್ನು ಕಾರ್ಯಾಚರಣೆಗೆ ತರಲು ಸರಕಾರ ಪ್ರಯತ್ನ ಪಡುತ್ತಿದೆ. ಕಳೆದ ಒಂದು ವರ್ಷದಿಂದ ಈ ಸಂಸ್ಥೆಯ ಸಹಾಯದಿಂದ ಬಹಳ ಹೆಚ್ಚಿನ ಕೆಲಸವನ್ನು ಮಾಡಲು ಸಹಾಯವಾಗಿದೆ. ಕೇಂದ್ರದಲ್ಲಿರುವ ವ್ಯವಸಾಯ ಖಾತೆಯ ಮಂತ್ರಿಗಳಾದ ಶ್ರೀ ಪಂಜಾಬರಾವ್ ದೇಶಮುಖ್‌ರವರು ಇಲ್ಲಿಗೆ ಬಂದಿದ್ದಾಗ ಈ ಸಂಸ್ಥೆಗಳ ಕೆಲಸಗಳನ್ನು ನೋಡಿ ಇದರಿಂದ ವ್ಯವಸಾಯ ಅಭಿವೃದ್ಧಿಗೆ ಸಂಸ್ಥಾನದಲ್ಲಿ ಅನುಕೂಲವಾಗುತ್ತದೆ ಎಂದು ಮೆಚ್ಚಿಗೆಯನ್ನೂ ಸೂಚಿಸಿದ್ದಾರೆ. ಅಮೆರಿಕಾ, ಇಂಗ್ಲೆಂಡು ಇಂತಹ ದೇಶಗಳಲ್ಲಿ ಈ ರೀತಿಯಾದ ಸಂಸ್ಥೆಗಳಿರುವುದರಿಂದ ಹೆಚ್ಚಿನ ಬೆಳೆಯನ್ನು ಬೆಳೆಯಲು ಅನುಕೂಲವಾಗಿದೆ. ಈ ವ್ಯವಸಾಯದ ಕ್ಷೇತ್ರದಲ್ಲಿ ಹೆಚ್ಚಿನ ಅಭಿಮಾನವಿರ ತಕ್ಕವರು ಈ ಕ್ಷೇತ್ರದಲ್ಲಿ ಪರಿಶೋಧನೆಯನ್ನು ನಡೆಸುವ ರೈತರಬಾಂಧವರು ಮಾತ್ರ ಸಂಸ್ಥೆಯಲ್ಲಿರಲು ಅವಕಾಶ ಕೊಡಲಾಗಿದೆ.

ಶ್ರೀಮಾನ್ ಬೊಮ್ಮೇಗೌಡರು ಈ ಸಂಘದಲ್ಲಿ ವರ್ತಕರು ಬೇರೆ ಇರುತ್ತಾರೆ ಎಂದು ಹೇಳಿದರು. ಕೆಲವು ಸಂದರ್ಭಗಳಲ್ಲಿ ಒಬ್ಬಿಬ್ಬರು ಇದ್ದಿರಬಹುದು ಇದರಿಂದಾಗಿ ವ್ಯವಸಾಯಕ್ಕೆ ಬೇಕಾದ ಸಾಮಗ್ರಿಗಳು ಸರಿಯಾಗಿ ಸಂಬಂಧಪಟ್ಟ ಇಲಾಖೆಯಿಂದ ಸರಬರಾಜಾಗುತ್ತಿಲ್ಲ ಎಂದು ಹೇಳಿದರು. ಹೀಗೆ ಕೆಲವು ಸಂದರ್ಭಗಳಲ್ಲಿ ಆಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆ. ಇದು ವಾಸ್ತವವಾದ ವಿಚಾರ. ಇದಕ್ಕಾಗಿ ಈ ರೈತ ಸಂಘದಲ್ಲಿ ಮತ್ತು ಯುವಕ ರೈತರ ಸಂಘದಲ್ಲಿ ಈಚೆಗೆ ಒಂದು ನಿರ್ಣಯವನ್ನು ಮಾಡಿದೆ. ಅದರಂತೆ ಸಂಸ್ಥಾನದ ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಸಾಧ್ಯವಾದರೆ ಹೋಬಳಿ ಮಟ್ಟದಲ್ಲಿ ಬರಿಯ ರೈತರಿರುವ ಸಹಕಾರ ಸಂಘಗಳನ್ನು ಮಾಡಿ ಆ ರೈತರ ಸಹಕಾರದ ಮೂಲಕ ವ್ಯವಸಾಯಾಭಿವೃದ್ಧಿಗಾಗಿ ಏನೇನು ಸಾಮಗ್ರಿಗಳು ಬೇಕಾಗುತ್ತವೆಯೋ ಎಂದರೆ ಕಬ್ಬಿಣ, ಗೊಬ್ಬರ ಮುಂತಾದುವು ಇವುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು ಮತ್ತು ಇವಕ್ಕೆ ಪರ್ಮಿಷನ್ನನ್ನು ಸರಕಾರ ಕೊಡಬೇಕು ಎಂದು ಮೇಲ್ಮನೆಯಲ್ಲಿ ಒಂದು ನಿರ್ಣಯವನ್ನು ಮಾನ್ಯ ಸದಸ್ಯರು ಕಳುಹಿಸಿದಾಗ ಸರಕಾರದ ಪರವಾಗಿ ಆಯಾ ಪ್ರದೇಶಗಳಿಗೆ ಬೇಕಾಗುವ ಗೊಬ್ಬರ, ಕಬ್ಬಿಣ, ಮತ್ತು ಇತರ ವ್ಯವಸಾಯಕ್ಕೆ ಉಪಯೋಗವಾಗುವ ಸಾಮಾನುಗಳನ್ನೆಲ್ಲಾ ಸಹಕಾರ ಸಂಘಗಳ ಮೂಲಕವೇ ಹಂಚುವ ವ್ಯವಸ್ಥೆ ಮಾಡಬೇಕೆನ್ನುವ ನಿರ್ಣಯವನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೆ. ಆ ಭರವಸೆಯ ಪ್ರಕಾರ ವ್ಯವಸಾಯಕ್ಕೆ

(ಶ್ರೀ ಎನ್. ರಾಚಯ್ಯ)

ಬೇಕಾಗುವ ಎಲ್ಲ ಸಾಮಾನುಗಳನ್ನೂ ಅದರಲ್ಲೂ ಕಬ್ಬಿಣ ಮತ್ತು ಗೊಬ್ಬರಗಳನ್ನು ಇನ್ನು ಮುಂದೆ ಸಹಕಾರ ಸಂಘಗಳ ಮೂಲಕವೇ ಕೊಡಬೇಕೆಂದು ಸಂಸ್ಥಾನದ ಮಟ್ಟದಲ್ಲಿರುವ ಎಲ್ಲ ಸಹಕಾರ ಸಂಘಗಳೂ ಕೊಡಬೇಕೆಂದು ಅವರಿಗೇ ವಹಿಸಲಾಗಿದೆ; ಇದಕ್ಕಾಗಿ ಕೇಂದ್ರ ಸರಕಾರದಿಂದ ನಮಗೆ ಬೇಕಾಗುವಂತಹ ಕಬ್ಬಿಣ ಮತ್ತು ಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ತರಿಸಿಕೊಟ್ಟು ಹಂಚತಕ್ಕ ಎಲ್ಲ ವ್ಯವಸ್ಥೆಯನ್ನು ಸಹಕಾರ ಸಂಘಗಳೇ ಈಗಾಗಲೇ ಮಾಡುತ್ತಿವೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ನಂತೋಷವಾಗುತ್ತದೆ.

ಶ್ರೀಮಾನ್ ವೀರೇಗೌಡರು ಮತ್ತು ಶ್ರೀಮಾನ್ ಬೊಮ್ಮೇಗೌಡರು ಈ ಬಗ್ಗೆ ಕೆಲವು ಆರೋಪಣೆಗಳನ್ನು ಮಾಡಿದರು. ಲೈಸನ್ಸ್ ಕೊಡುವಾಗ ಎಲ್ಲರಿಗೂ ಕೊಡುತ್ತಾರೆ ಎಂದು ಹೇಳಿದರು. ಈ ವಿಚಾರವನ್ನ ಗಮನಕ್ಕೆ ಬಂದ ತಕ್ಷಣ ಖಾನಗಿಯವರಿಗೆ ಇನ್ನು ಮುಂದೆ ಲೈಸನ್ಸ್ ಕೊಡ ಕೂಡದು ಎಂದು ಆಜ್ಞೆ ಮಾಡಿದ್ದೇನೆ. ಇದನ್ನು ಅವರು ತಿಳಿದುಕೊಂಡಿಲ್ಲ ಎಂದು ತೋರುತ್ತದೆ.

ಶ್ರೀ ಜಿ.ಎಸ್. ಬೊಮ್ಮೇಗೌಡ (ಮಂಡ್ಯ).—ತಾವು ಈಗಾಗಲೇ ಲೈಸನ್ಸ್‌ನ್ನು ಕೊಟ್ಟಿಲ್ಲವೆಂದು ಹೇಳುತ್ತೀರಿ. ಅಮೋನಿಯಂ ನಿಟ್ರೇಟನ್ನು ಬೇರೆ ಕಡೆಯಿಂದ ತಂದು ಕೆಲವರು ಮಾರುತ್ತಿದ್ದಾರೆ. ಸಹಕಾರ ಸಂಘಗಳ ಮೂಲಕವೇ ಕೊಡಬೇಕೆಂದು ಏರ್ಪಾಡು ಮಾಡಿರುವಾಗ ಇನ್ನು ಮುಂದೆ ಖಾನಗಿಯವರು ಯಾರೂ ಇದನ್ನು ಮಾರ ಕೂಡದು ಎಂದು ಆಜ್ಞೆ ಕೊಡಬೇಕು ಎಂದು ನಾನು ಹೇಳಿದೆ.

ಶ್ರೀ ಎಸ್. ರಾಚಯ್ಯ.—ಈ ವಿಷಯದಲ್ಲಿ ನ್ಯಂತವಾಗಿ ವ್ಯವಹಾರ ಮಾಡತಕ್ಕವರಿಗೆ ನಾವು ಲೈಸೆನ್ಸುಗಳನ್ನು ಹೊಸದಾಗಿ ಕೊಡಬಾರದು ಎಂದು ಈಗಾಗಲೇ ಆಜ್ಞೆ ಮಾಡಲಾಗಿದೆ. ಅದರಂತೆ ಜಾರಿಗೆ ತರಬಹುದು. ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾದ ಎಲ್ಲ ಅನುಕೂಲಗಳನ್ನು ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಮತ್ತೆ ಲೈಸೆನ್ಸುಗಳನ್ನು ರಿನ್ಯೂ ಮಾಡಬೇಕು ಮಾಡಬಾರದೇ ಎನ್ನುವುದನ್ನೆಲ್ಲ ಸರಕಾರ ಪರಿಶೀಲನೆ ಮಾಡುತ್ತಿದೆ. ಮಾನ್ಯ ಸದಸ್ಯರು ಹೇಳಿದ ಕಬ್ಬಿಣ ಮತ್ತು ಗೊಬ್ಬರಗಳ ಕೊರತೆಯನ್ನುತಪ್ಪಿಸಲು ರೈತರ ಹಿತದೃಷ್ಟಿಯಿಂದ ಸಹಕಾರ ಸಂಘಗಳ ಮೂಲಕವೇ ಹಂಚಬೇಕೆನ್ನುವ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಮತ್ತು ನಾನು ಆಗಲೇ ಹೇಳಿದಂತೆ ಅಡ್ವೈಸರಿ ಬೋರ್ಡನ್ನು ಮಾಡಿರುವುದರಿಂದ ಅವರು ವರದಿಯನ್ನು ತಿಂಗಳ ಕೊನೆಯ ಭಾಗದಲ್ಲಿ ಕಳುಹಿಸುವ ಸಂಭವವಿದೆ. ಜಾಗ್ರತೆಯಾಗಿ ಅವರ ವರದಿ ಬರುತ್ತದೆ. ಆದು ಬಂದ ಮೇಲೆ ಅನುಭವವಿರತಕ್ಕ ಅಧಿಕಾರಿಗಳು ಮತ್ತು ಎಕ್ಸ್‌ಪರ್ಟುಗಳು, ತಜ್ಞರು ಇರತಕ್ಕ ಖಾನಗೀ ಜನಗಳಿರುವ ಒಂದು ಸಣ್ಣ ಕಮಿಟಿಯನ್ನು ಮಾಡಿ ಈ ವರದಿಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದಿದ್ದೇವೆ. ಇದರಂತೆ ವ್ಯವಸಾಯದ ಇಲಾಖೆಯನ್ನು ಹೆಚ್ಚಿನ ರೀತಿಯಿಂದ Re-organise ಮಾಡಿದಂತಾಗುತ್ತದೆ ಮತ್ತು ಇದರಿಂದಾಗಿ ನರಕಾರದ ಕೆಲಸ ಚೆನ್ನಾಗಿ ನಡೆಯುತ್ತದೆಎಂದು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಹಳ ನಂತೋಷವಾಗುತ್ತದೆ.

ವ್ಯವಸಾಯ ಇಲಾಖೆಯನ್ನು ಇನ್ನೂ ಹೆಚ್ಚಿನ ಒಂದು ರೀತಿಯಲ್ಲಿ ಮುಂದುವರಿಸಬೇಕು. ಈ ಇಲಾಖೆಯಿಂದ ರೈತರಿಗೆ ಜಾಸ್ತಿ ಅನುಕೂಲವಾಗಲ ಎಂದು 1958 ನೆಯ ಇಸವಿಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಅನ್ನು ನೇಮಿಸಿದೆವು. ಮೊದಲು ಒಬ್ಬರೇ ಡೈರೆಕ್ಟರ್ ಇದ್ದರು. ಕಳೆದ ವರ್ಷ, 1959ರಲ್ಲಿ ಮತ್ತೊಬ್ಬರನ್ನು ಜಾಯಿಂಟ್ ಡೈರೆಕ್ಟರಾಗಿ ಮಾಡಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ವ್ಯವಸಾಯದ ಕ್ಷೇತ್ರವನ್ನು ಹೆಚ್ಚಿನ ಗಮನದಿಂದ ಮುಂದುವರಿಸಬೇಕು ಎಂದು ಆಹಾರದ ದೃಷ್ಟಿಯಿಂದ ಮತ್ತು ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡಬೇಕೆನ್ನುವ ದೃಷ್ಟಿಯಿಂದ, ಎರಡು ವರ್ಷಗಳಲ್ಲಿ ಇಬ್ಬರು ಜಾಯಿಂಟ್ ಡೈರೆಕ್ಟರುಗಳನ್ನು ಮಾಡಿದ್ದೇವೆ. ಇತರೆ ಸಂಸ್ಥಾನಗಳಲ್ಲಿರುವಂತೆ ಹೆಚ್ಚಿನ ಸಿಬ್ಬಂದಿಯನ್ನು ಡೈರೆಕ್ಟರ ಮಟ್ಟದಲ್ಲಿ ಮಾಡಿದ್ದೇವೆ. ಒಬ್ಬರು ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್, ಒಬ್ಬ ಜಾಯಿಂಟ್ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಇನ್-ಚಾರ್ಜ್ ಆಫ್ ಎಕ್ಸ್‌ಟೆನ್ಷನ್, ಮತ್ತೊಬ್ಬ ಜಾಯಿಂಟ್ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಇನ್-ಚಾರ್ಜ್ ಆಫ್ ಅಗ್ರಿಕಲ್‌ಚರಲ್ ರಿಸರ್ಚ್ ಮತ್ತು ಎಜುಕೇಶನ್ ಎಂದು ಹೇಳಿ ಮೂರು ಡೈರೆಕ್ಟರುಗಳನ್ನು ಈಗಾಗಲೇ ಮಾಡಿದ್ದೇವೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪುರ).—ವೇಗವಾಗಿ ಮಾಡುತ್ತೇವೆಂದು ಹೇಳಿದಿರಿ. ಬಹಳ ವೇಗವಾಗಿ ಮಾಡಬೇಕಾದರೆ ಈ ವರ್ಷ ಎಷ್ಟು ಮಾಡುತ್ತೀರಿ?

ಶ್ರೀ ಎಸ್. ರಾಚಯ್ಯ.—ಅದರ ಅವಶ್ಯಕತೆ ಇದ್ದರೆ, ಇಲ್ಲಿ ಅಭಿಪ್ರಾಯಪಟ್ಟರೆ, ಮಾಡೋಣ. ಈ ವಿಚಾರದಲ್ಲಿ ಇತರ ಸಂಸ್ಥಾನಗಳಲ್ಲಿರುವುದನ್ನು ತಮ್ಮ ಗಮನಕ್ಕೆ ತರುವುದಾದರೆ, 4-5 ಜನ ಜಾಯಿಂಟ್ ಡೈರೆಕ್ಟರುಗಳಿದ್ದಾರೆ. ನಮ್ಮಲ್ಲಿಯೇ ಕಡಮೆ ಇರತಕ್ಕದ್ದು. ಬಹಳ ಹೆಚ್ಚಿಗೆ ಕೆಲಸವಿದೆ, ಬಹಳ ಕಷ್ಟವಾಗುತ್ತಿದೆ ಎಂದು ಒಪ್ಪಿದ್ದರಿಂದ ಇಬ್ಬರು ಜಾಯಿಂಟ್ ಡೈರೆಕ್ಟರುಗಳನ್ನು ನೇಮಕ ಮಾಡಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧಿಕಾರಿಗಳನ್ನು ಜಾಸ್ತಿ ಮಾಡಿದಿರಿ. ಆದರೆ ಈ ಇಬ್ಬರು ಜಾಯಿಂಟ್ ಡೈರೆಕ್ಟರಲ್ಲಿ, ಒಬ್ಬ ಜಾಯಿಂಟ್ ಡೈರೆಕ್ಟರು ಬರಿಯ Politics ಮಾಡುತ್ತಿದ್ದಾರೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ರಾಚಯ್ಯ.—ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ಸದಸ್ಯರು uncharitable remarks ಮಾಡಿದ್ದಾರೆ. ನಮ್ಮ ಇಲಾಖೆಯಲ್ಲಿ ಯಾವ ಅಧಿಕಾರಿಗಳೂ ರಾಜಕೀಯಕ್ಕೆ ಹೋಗುವುದಿಲ್ಲ. ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಮತ್ತು ಇನ್ನೂ ಹೆಚ್ಚಿನ ಕೆಲಸ ಮಾಡುವ ಶಕ್ತಿ, ದಕ್ಷತೆ ಅವರಿಗಿದೆ. ಈ ಅಭಿಮಾನದಿಂದ ಕೆಲಸ ಮಾಡುತ್ತಾ ಇದ್ದಾರೆ. ಅವರ ವಿಚಾರದಲ್ಲಿ ಅಂಥ ಅನುಮಾನವಿದ್ದರೆ, ಅದನ್ನು ಬಿಟ್ಟು ಬಿಡಬೇಕು. ಎಲ್ಲ ರೀತಿಯಲ್ಲಿಯೂ ಈ ಇಲಾಖೆಯಲ್ಲಿ ಸುವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಒಬ್ಬ Joint Director in charge of Extension, ಇನ್ನೊಬ್ಬರು in charge of Research and Education, ಮುಂತಾದ routine administration ವಿಚಾರವನ್ನು ಹೇಳಿದಿರಿ. ಹಾರ್ಟಿಕಲ್‌ಚರ್‌ಗೆ ಡೈರೆಕ್ಟರ್ ಹುದ್ದೆಯನ್ನು ಮಾಡುವುದಿಲ್ಲವೇ?

ಶ್ರೀ ಎಚ್. ರಾಚಯ್ಯ.—Horticulture ವಿಚಾರದಲ್ಲಯೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೂ ಪ್ರತ್ಯೇಕವಾಗಿ, Superintendent of Government Gardens ಎಂದು ಹೆಸರಿರತಕ್ಕ ಒಬ್ಬ ಆಫೀಸರನ್ನು ಇಟ್ಟಿದ್ದೇವೆ, ಅವರ ಸ್ಟೇಟಸ್ಸನ್ನು ಡೈರೆಕ್ಟರ ಸ್ಟೇಟಸ್ಸಿಗೆ ತರಬೇಕೆನ್ನುವುದು ಸರ್ಕಾರದ ಯೋಚನೆಯಲ್ಲಿದೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಪ್ರತ್ಯೇಕವಾಗಿ ಒಬ್ಬ ಆಫೀಸರನ್ನು ನೇಮಿಸಿದ್ದೇವೆ. ಈ ವ್ಯವಸಾಯ ಇಲಾಖೆಯಲ್ಲಿಯೇ ಡೈರೆಕ್ಟರು, ಜಾಯಿಂಟ್ ಡೈರೆಕ್ಟರುಗಳು ಹೆಚ್ಚಿನ ರೀತಿಯಲ್ಲಿ ತರಕಾರಿ, ಹಣ್ಣು ಹಂಪಲುಗಳು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಈ Garden Superintendentರ ಹುದ್ದೆಯನ್ನು Director ಹುದ್ದೆಗೆ ಏರಿಸಬೇಕೆನ್ನುವ ವಿಷಯ ಎಷ್ಟೋ ವರ್ಷಗಳಿಂದ ಸರ್ಕಾರದ ಮುಂದಿದೆ.

ಶ್ರೀ ಎಚ್. ರಾಚಯ್ಯ.—ಇರಬಹುದು. ಈಗ ಹೊಸದಾಗಿ ಸಂಸ್ಥಾನ ವಿಸ್ತಾರವಾಗಿರುವುದರಿಂದ, ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗ ಎರಡು ವರ್ಷಗಳಿಂದಲೂ ಪರಿಶೀಲನೆಯಲ್ಲಿ ಇದೆ, ಇದೆ ಎಂದು ಹೇಳುತ್ತಿದ್ದೀರಿ. ಅಗ್ರಿಕಲ್ಚರ್ ಇಲಾಖೆಯಲ್ಲಿ ಡೈರೆಕ್ಟರ ಹುದ್ದೆಗಳನ್ನು ಏಕ್‌ದಂ ಜಾಸ್ತಿ ಮಾಡಿ, ಹಾರ್ಟಿಕಲ್ಚರಿಗೆ ಡೈರೆಕ್ಟರನ್ನು ನೇಮಿಸುವುದಕ್ಕೆ ಏಕೆ ಗಮನಕೊಟ್ಟಿಲ್ಲ ! ಇದನ್ನು ಮಾಡುವುದಕ್ಕೆ ಆತಂಕ ಏನು ?

ಶ್ರೀ ಎಚ್. ರಾಚಯ್ಯ.—ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಲ್. ನರಸಿಂಹಯ್ಯ(ಹೆಬ್ಬೂರು).—ಡೆಪ್ಯುಟಿ ಡೈರೆಕ್ಟರುಗಳನ್ನು ಕೂಡಲೆ ನೇಮಕ ಮಾಡುತ್ತೀರ. ಹೋದ ಅಸೆಂಬ್ಲಿಯಲ್ಲಿಯೇ ಹೇಳಿದ್ದೇನೆ. ಖಾಲಿಯಾಗಿರತಕ್ಕದ್ದನ್ನು ಹಾಗೆಯೇ ಯಾರಿಗೂ ಕೊಡದೆ ಇಟ್ಟಿದ್ದೀರಿ, ಕಾರಣವೇನು ?

ಶ್ರೀ ಎಚ್. ರಾಚಯ್ಯ.—ಎಲ್ಲಾ ಕಡೆಯಲ್ಲಿಯೂ ನೇಮಿಸಿದ್ದೇವೆ. ಪರ್ಸನೆಲ್ ಪೋಸ್ಟ್‌ಮಾಡಿ, ಡೆಪ್ಯುಟಿ ಡೈರೆಕ್ಟರು ಕೆಲಸ ಮಾಡುತ್ತಿದ್ದಾರೆ. ಯಾವ ಸ್ಥಾನವೂ ಖಾಲಿ ಇಲ್ಲ. ಇನ್ನೊಬ್ಬರನ್ನು ನೇಮಿಸಬೇಕಾಗುತ್ತದೆ. ಮೊನ್ನೆತಾನೇ ತೀರ್ಮಾನ ತೆಗೆದುಕೊಂಡಿದೆ. ಗೊಬ್ಬರ ಮತ್ತು ಕಬ್ಬಿಣ ಹಂಚುವುದಕ್ಕೆ, ವ್ಯವಸಾಯ ಇಲಾಖೆಗೆ ಒಬ್ಬ ಡೆಪ್ಯುಟಿ ಡೈರೆಕ್ಟರನ್ನು ಕೊಡಬೇಕಾಗಿದೆ. ಅದನ್ನು ಕೂಡ ಸ್ವಲ್ಪದಿವಸಗಳಲ್ಲಿಯೇ ಮಾಡುತ್ತೇವೆ. ಬೇರೆ ಯಾವ ಡೆಪ್ಯುಟಿ ಡೈರೆಕ್ಟರ ಸ್ಥಾನವೂ ಖಾಲಿ ಇಲ್ಲ.

Sri ALUR HANUMANTHAPPA (Nelamangala).—May I know how many 'vacant gazetted posts have not been filled up so far in the Department of Agriculture ?

Sri N. RACHIAH.—All the vacancies have been filled up. Some times, for want of candidates, and some of them having been deputed to foreign countries or other States for training, some of the vacancies could not be filled up.

Sri C. J. MUCKANNAPPA.—What happened to the reorganisation of the Agricultural Department ?

ಶ್ರೀ ಎಚ್. ರಾಚಯ್ಯ.—ಈಗ ತಾನೇ ಹೇಳಿದೆ, ಈ ಒಂದು ಇಲಾಖೆಯನ್ನು ಪುನರ್‌ರಚನೆ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಂಡಿದ್ದೇವೆಂದು. ಒಬ್ಬ Special Officerನ್ನು ನೇಮಿಸಿದೆ. ಅವರ ವರದಿ ಈ ತಿಂಗಳಿನಲ್ಲಿ ಬರುವ ಭರವಸೆ ಇದೆ, ಬಂದಮೇಲೆ ಕೂಲಂಕಷವಾಗಿ ಯೋಚನೆ ಮಾಡಿ ಪುನರ್‌ವ್ಯವಸ್ಥೆ ಮಾಡುತ್ತೇವೆಂದು ಮೊದಲೇ ಹೇಳಿದ್ದೇನೆ.

Sri A. R. KARISIDDAPPA (Arsikere).—The Hon'ble Minister said that the Government were thinking of reorganising the Agricultural Department to make it work efficiently and now he says that he is going to increase the number of Joint Agricultural Directors. Sri Veere Gowda in the course of his speech said that it would not be possible for one Agricultural Inspector to go and keep in touch with a number of villages ; therefore he has suggested the increase of the number of Agricultural inspectors at the Taluk level. Will the Government consider the suggestion of increasing the number of Agricultural Inspectors while re-organising the Agricultural Department ?

ಶ್ರೀ ಎಚ್. ರಾಚಯ್ಯ.—ನಾನು ಮೊದಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಫಾಲೋ ಮಾಡಲಿಲ್ಲವೆಂದು ತಿಳಿದುಕೊಡಿದ್ದೇನೆ. ರಾಷ್ಟ್ರೀಯ ವಿಸ್ತರಣ ಯೋಜನೆಯ ಪ್ರಕಾರ ಗ್ರಾಮ ಸೇವಕರು ಸಾಮಾನ್ಯವಾಗಿ 100ಕ್ಕೆ 80ರಷ್ಟು ಭಾಗ ಕಾಲವನ್ನು ವ್ಯವಸಾಯ ಮತ್ತು ಪ್ರಾಣಿ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೆ ಕೊಡಬೇಕೆಂದು ನಿರ್ಧರಿಸಿದೆ. ಈ ದೃಷ್ಟಿಯಿಂದ ನಾವು ಹೆಚ್ಚಿಗೆ ಫೀಲ್ಡ್ ವರ್ಕರ್ಸ್ ಅನ್ನು ನೇಮಿಸಬೇಕೆಂದಿದ್ದೇವೆ; ನೇಮಿಸುತ್ತಲೂ ಇದ್ದೇವೆ. ರಾಷ್ಟ್ರೀಯ ವಿಸ್ತರಣ ಯೋಜನೆಯ ಪ್ರಕಾರ ಒಂದೆರಡು ವರ್ಷಗಳಲ್ಲಿ ಇಡಿಯ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಈ ಯೋಜನೆ ಬರುತ್ತದೆ; ಆವಗ ಈ ಕೊರತೆ ಕೆಲಪುಕಡೆಯೂ ಇರುವದಿಲ್ಲ. ಬಹಳ ಕಡೆ ಈ ಕೊರತೆ ನರಿಹೋಗಿದೆ. ತಾಲ್ಲೂಕು ಲೆವಲ್ಲಿನಲ್ಲಿ ಅಗ್ರಿಕಲ್ಚರ್ ಡೆಮಾನ್‌ಸ್ಟ್ರೇಟರ್, ಎಕ್ಸ್‌ಟೆನ್‌ಷನ್ ಆಫೀಸರು ಇದ್ದಾರೆ; ಜಿಲ್ಲಾ ಮಟ್ಟದಲ್ಲಿ ಡಿಸ್ಟ್ರಿಕ್ಟ್ ಅಗ್ರಿಕಲ್ಚರ್ ಆಫೀಸರು ಇದ್ದಾರೆ, ಡಿವಿಜನ್ ಮಟ್ಟದಲ್ಲಿ ಡೆಪ್ಯುಟಿ ಡೈರೆಕ್ಟರ್ ಇದ್ದಾರೆ. ಸಂಸ್ಥಾನದ ಲೆವಲ್ಲಿನಲ್ಲಿ ಡೈರೆಕ್ಟರು ಇದ್ದಾರೆ. ಎಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನೆ ಇಲ್ಲವೋ ಅಲ್ಲಿ ಮಾತ್ರ ಫೀಲ್ಡ್ ಮೆನ್ ಇದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಇರುವ ಕಡೆ, ಒಬ್ಬರಿಗೆ ಬದಲು ಒಂದೊಂದು ತಾಲ್ಲೂಕಿನಲ್ಲಿ 3-4 ಜನ ಗ್ರಾಮ ಸೇವಕರು ಇರುವ ಕಾರಣ ಅವರು ಈ ಕೆಲಸವನ್ನು ನೋಡಿಕೊಳ್ಳುತ್ತಿರುವ

(ಶ್ರೀ ಎನ್. ರಾಚಯ್ಯ)

ಕಾರಣ, ಅಂಥ ಕೊರತೆ, ತೊಂದರೆ ಇಲ್ಲ. ಇದು ಸರಿಹೋಗಿದೆ ಎಂದು ಹೇಳುತ್ತೇನೆ.

ಬೀಳು ಭೂಮಿಯನ್ನು ಆಬಾದಿಗೆ ತಂದಿಲ್ಲ; ಸರ್ಕಾರ ತರುವುದಕ್ಕೆ ಯಾವ ಯೋಜನೆಯನ್ನೂ ಮಾಡಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಿದರು. ನಾನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಡಿಮ್ಯಾಂಡ್ ಮೇಲೆ ಉತ್ತರ ಕೊಡುತ್ತಾ, ಈ ವಿಚಾರದಲ್ಲಿರುವ ಒಂದು ಯೋಜನೆಯನ್ನು ತಮ್ಮ ಮುಂದೆ ಇಟ್ಟೆ. ಈ ಒಂದು ಯೋಜನೆಯ ಪ್ರಕಾರ, ಎಲ್ಲೆಲ್ಲ 100 ಎಕರೆಗಿಂತ ಹೆಚ್ಚಿಗೆ ಜಮೀನು ಕೊಟ್ಟಿದ್ದೇವೋ ಮತ್ತು ಮುಂದೆ ಜಮೀನು ಕೊಡಬೇಕಾಗಿದೆಯೋ, ಅಂಥ ಕಡೆಗಳಲ್ಲೆಲ್ಲಾ ಸಹಕಾರ ಸಂಘಗಳನ್ನು ಮಾಡಿ, ಆ ಸಹಕಾರ ಸಂಘಗಳ ಮೂಲಕ ಅವರಿಗೆ ಜಮೀನು ಕೊಡತಕ್ಕಂಥಾದ್ದು ಮತ್ತು ಆ ಜಮೀನಲ್ಲಿ ಆಬಾದು ಮಾಡಬೇಕಾದರೆ ಏನೇನು ವ್ಯವಸಾಯಕ್ಕೆ ಬೇಕಾದ ಅನುಕೂಲಗಳು ಬೇಕೋ ಆ ಎಲ್ಲಾ ಅನುಕೂಲಗಳನ್ನು ಒದಗಿಸಬೇಕೆಂದು ಈಗಾಗಲೇ ಸರ್ಕಾರದವರು ಯೋಜನೆಯನ್ನು ತಯಾರುಮಾಡಿದ್ದಾರೆ, ಇನ್ನೂ ತೀರ್ಮಾನ ತೆಗೆದುಗೊಂಡಿಲ್ಲ. ಈ ಯೋಜನೆಯಿಂದ ಬೀಳು ಬಿದ್ದಿರುವ ಜಮೀನು ಆಬಾದಿಗೆ ಬರಲು ಸಹಾಯವಾಗುವುದಲ್ಲದೆ, ವ್ಯವಸಾಯವನ್ನೇ ಅವಲಂಬಿಸಿರುವ ಬಡ ಜನಗಳಿಗೆ ಅನುಕೂಲವಾಗುತ್ತದೆ. ಮತ್ತು ಆಹಾರದ ಪ್ರಶ್ನೆ ಬಹು ಬೇಗ ಬಗೆಹರಿಯುತ್ತದೆ. ಬೀಳು ಬಿದ್ದ ಜಮೀನುಗಳನ್ನು ಆಬಾದಿಗೆ ತರುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆ. ಈ ವಿಚಾರದಲ್ಲಿ ಬಹು ತೀವ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂಬ ಆಸಕ್ತಿ ಸರ್ಕಾರಕ್ಕಿರುವ ಕಾರಣ, ಈ ಶಂಕೆಗೆ ಅವಕಾಶವಿಲ್ಲ, ಈ ಆರೋಪಣೆ ಸರಿಯಿಲ್ಲವೆಂದು ಈ ಸಂಧರ್ಭದಲ್ಲಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಒಂದು ಸ್ಕೀಮ್ ಇಟ್ಟುಕೊಂಡಿದ್ದಾರೆ. ಆ ಸ್ಕೀಮ್ ಏನೆಂದರೆ Scheme for Rehabilitating landless labourers ಎಂದು. ಇದನ್ನು ಉತ್ತರ ಪ್ರದೇಶದಲ್ಲಿ ಜಾರಿಗೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿಯೂ ವ್ಯವಸಾಯಗಾರರು ಮತ್ತು ಕೂಲಿಗಾರರು ಯಾರಿಗೆ ಜಮೀನು ಇಲ್ಲವೋ, ಅಂಥವರಿಗೆ ಜಮೀನು ಕೊಟ್ಟರೆ, ಈ ಯೋಜನೆಯ ಪ್ರಕಾರ ವ್ಯವಸಾಯಕ್ಕೆ ಬೇಕಾದಂಥ ಎಲ್ಲಾ ಸೌಕರ್ಯಗಳನ್ನು ಒದಗಿಸತಕ್ಕಂಥ ಒಂದು ಸ್ಕೀಮನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿಕೊಂಡಿದ್ದೇವೆ. ಅವರು ಕೊಡತಕ್ಕ ಸಂಭವವಿದೆ, ಇದರಲ್ಲಿ ಬಹುಭಾಗ ಬಡಜನರಿಗೆ ಲ್ಯಾಂಡ್‌ಲೆಸ್ ಲೇಬರರಿಗೆ ಅನುಕೂಲವಾಗುತ್ತದೆ ಮತ್ತು ಜಮೀನು ಕೂಡ ಹೆಚ್ಚಿನ ಪ್ರಮಾಣದಲ್ಲಿ ಆಬಾದು ಆಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ವಿಚಾರವನ್ನು ಕೇಳಿದರು. ಭೂಮಿಯಲ್ಲಿ ನೀರು ಹರಿದು ಹೋಗುವಾಗ ಅದರ ಜೊತೆಗೆ ಭೂಮಿಯಲ್ಲಿ ಮಣ್ಣಿನ ಸಾರಾಂಶವೂ ಹೋಗದಂತೆ ತಡೆಗಟ್ಟಬೇಕಾದರೆ, ಅತ್ಯಗತ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಬೊಂಬಾಯಿ ಕರ್ಣಾಟಕ ಏರಿಯಾದಲ್ಲಿ ಈ ಸಂಬಂಧದಲ್ಲಿ ಒಂದು ಕಾನೂನು ಜಾರಿಯಲ್ಲಿದೆ; ಹಳೆಯ ಮೈಸೂರಿನಲ್ಲಿ ಆ ಕಾನೂನು ಜಾರಿಯಲ್ಲಿಲ್ಲ. ಆ ಮನೂದೆ ತಮ್ಮ ಮುಂದಿದೆ. ಈ ಕಾನೂನನ್ನು ಸಮನ್ವಯಮಾಡಿ ಇಡಿಯ ಸಂಸ್ಥಾನಕ್ಕೆ ಈ Soil Conservation Actನ್ನು ಜಾರಿಗೆ ಕೊಟ್ಟು ರೈತರಿಗೆ ಹೆಚ್ಚಿಗೆ ಉಪಯೋಗವಾಗುವ ರೀತಿಯಲ್ಲಿ ಅನುಕೂಲಮಾಡಿಕೊಡಬೇಕೆಂದು ಕಾತುರರಾಗಿದ್ದೇವೆ. ಈ ಕಾಯಿದೆ ತಮ್ಮ ಮುಂದೆ ಬಂದತಕ್ಷಣ ತಾವು ಜಾಗ್ರತೆಯಾಗಿ ಪಾನುಮಾಡುತ್ತೀರೆಂದು ನಂಬಿದ್ದೇನೆ.

ನಾನು ಈಗಾಗಲೇ ಈ ಸಾಯಿಲ್ ಕನ್‌ಸರ್ವೇಷನ್ ಆಕ್ಟ್ ಪ್ರಕಾರ ಒಂದು ಲಕ್ಷ ಅರವತ್ತೈದು ಸಾವಿರ ಎಕರೆ ಭೂಮಿಯನ್ನು ಆಬಾದು ಮಾಡಿಸಿದ್ದೇವೆ. ನಾವು ಈಗ ರಾಜ್ಯದ ಎಲ್ಲ ಭಾಗಗಳಿಗೂ ಏಕರೂಪತೆಯ ಕಾನೂನನ್ನು ಮಾಡುತ್ತಿರುವ ಕಾರಣ ರೈತರಿಗೆ ಈ ಭಾಗದಲ್ಲಿರತಕ್ಕ ತೊಂದರೆಯನ್ನು ಇನ್ನು ಸ್ವಲ್ಪ ದಿವಸಗಳಲ್ಲೆ ತಪ್ಪಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಮಿನಿಮಂ ವೇಜಸ್ ಸಮಿತಿಯವರ ಸಲಹೆಗಳಿಗನುಗುಣವಾಗಿ ಸರ್ಕಾರದವರು ಈ ಅಗ್ರಿಕಲ್‌ಚರಲ್ ಲೇಬರರ್ಸುಗಳಿಗೇನು ಅನುಕೂಲ ಮಾಡಿದ್ದಾರೆ?

ಶ್ರೀ ಎನ್. ರಾಚಯ್ಯ.—ಈ ಬಗ್ಗೆ ಆಗಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ವ್ಯವಸಾಯದ ಇಲಾಖೆಯಲ್ಲಿ ಈ ಬಾಬುಗಾಗಿಯೇ ಒಬ್ಬ ಸ್ಪೆಷಲ್ ಆಫಿಕಾರಿಗಳನ್ನು ಇಡಬೇಕಾಗಿ ಬರುತ್ತದೆ ಯಾದುದರಿಂದ ವ್ಯವಸಾಯದ ಇಲಾಖೆಯ ಮೂಲಕ ಇದನ್ನು ಜಾರಿಗೆ ಕೊಡಲು ಅವಕಾಶವಿಲ್ಲ.

ಇನ್ನು ಬುಲ್‌ಡೋಸರ್ಸ್ ಮತ್ತು ಟ್ರ್ಯಾಕ್ಟರುಗಳ ವಿಚಾರದಲ್ಲಿ ಶ್ರೀ ಜಿ. ಶಿವಪ್ಪನವರು ಮತ್ತು ಶ್ರೀ ಜಿ. ಎಸ್. ಪುಟ್ಟಣ್ಣನವರೂ ಮತ್ತು ಇನ್ನು ಕೆಲವು ಸದಸ್ಯರುಗಳು ಪ್ರಾತನಾಡಿದ್ದಾರೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಕಾಗದ ಪತ್ರಗಳನ್ನು ಬರೆದು 6 ತಿಂಗಳ ಮೇಲಾಗಿದೆ. ನಮಗೀಗ 50 ಟ್ರಾಕ್ಟರ್ಸ್ ಮತ್ತು 50 ಬುಲ್‌ಡೋಸರ್ಸ್‌ಗಳು ಬೇಕಾಗಿವೆ. ಅಷ್ಟನ್ನು ಕೊಡಬೇಕೆಂದು ನಾವೀಗ ಕೇಳಿದ್ದೇವೆ. ಆದರೆ ಕೇಂದ್ರ ಸರ್ಕಾರದವರಿಗೂ ಕೂಡ ಏನೋ ಕೆಲವು ಅನಿವಾರ್ಯಗಳಿದೆಯೆಂದು ಕೊಡುವುದಕ್ಕಾಗಿಲ್ಲ. ಆದರೆ ಅವರು ಆದಷ್ಟೂ ಜಾಗ್ರತೆ ನಮಗೆ ಇವುಗಳನ್ನೊದಗಿಸುತ್ತಾರೆಂದು ನಾವು ಆಶಿಸಿದ್ದೇವೆ. ಆದರೆ ಇನ್ನು ರೇಟಿನ ವಿಚಾರದಲ್ಲೂ ಮತ್ತು ಈ ಟ್ರಾಕ್ಟರುಗಳನ್ನು ಕೊಡತಕ್ಕ ನಿಬಂಧನೆಗಳ ವಿಚಾರದಲ್ಲೂ ಕೆಲವು ತೊಂದರೆಗಳಿರುತ್ತವೆಂದು ಹೇಳಿದ್ದಾರೆ. ಟ್ರಾಕ್ಟರುಗಳನ್ನು ಕೊಡತಕ್ಕ ರೇಟ್ ಬಹಳ ಜಾಸ್ತಿಯಾಗಿ ರೈತರಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಈ ಅಡ್ಡಿ ಆತಂಕಗಳನ್ನೂ ಮತ್ತು ರೇಟ್‌ನ್ನೂ ನಿವಾರಣೆ ಮಾಡಿ ರೈತರಿಗೆ ಸೂಕ್ತ ರೀತಿಯಲ್ಲಿ ಅನುಕೂಲ ಕಲ್ಪಿಸತಕ್ಕ ಬಗ್ಗೆ ಸರ್ಕಾರದವರಾಗಲೇ ತೀವ್ರಗಮನಕೊಟ್ಟಿದ್ದಾರೆ.

ಶ್ರೀ ಆಲೂರು ಹನುಮಂತಪ್ಪ.—ಜಿಲ್ಲಾ ಲೆವಲ್‌ನಲ್ಲಿ ಅಗ್ರಿಕರ್‌ಚರಲ್ ಫೇರ್ ನಡೆಸಲು ಸರ್ಕಾರದವರು ಕೊಡತಕ್ಕ ಗ್ರಾಂಟ್ ವಿಚಾರ ಏನಾಯಿತು?

ಶ್ರೀ ಎನ್. ರಾಚಯ್ಯ.—ಈ ಪ್ರದರ್ಶನವನ್ನು ಕೇವಲ ಜಿಲ್ಲಾ ಮಟ್ಟದಲ್ಲೇ ಅಲ್ಲ; ಇದನ್ನು ಪ್ರತಿಯೊಂದು ತಾಲ್ಲೂಕ್ ಹಾಗೂ ಹೋಬಳಿಗಳ ಮಟ್ಟದಲ್ಲಿ ಈ ಅಗ್ರಿಕಲ್‌ಚರಲ್ ಎಗ್ಸಿಬಿಷನ್, ಸೆಮಿನಾರ್, ಪರಿಷತ್ತು ಇತ್ಯಾದಿಗಳನ್ನೆಲ್ಲ ಕರೆಯಬೇಕೆಂದು ಪ್ರಯತ್ನಮಾಡಲಾಗುವುದು. ಇವುಗಳಿಂದ ರೈತರಲ್ಲಿ ಒಂದು ಜಾಗ್ರತಿಯುಂಟಾಗುತ್ತದೆ. ಈ ಬಗ್ಗೆ ಸರ್ಕಾರದವರಾಗಲೇ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಮೊನ್ನೆತಾನೆ ನಾನು ಶಿವಮೊಗ್ಗಕ್ಕೆ ಹೋಗಿದ್ದಾಗ ಒಂದು ವ್ಯವಸಾಯದ ಪರಿಷತ್ತಿನ ದೊಡ್ಡ ಭವನವನ್ನು ಓಪನ್‌ಮಾಡಿ ಬಂದಿರುತ್ತೇನೆ.

ಜನರು ಈಗ ಪ್ರತಿಯೊಂದು ಕಡೆಯಲ್ಲೂ ಈ ವ್ಯವಸಾಯೋದ್ಯಮದಲ್ಲಿ ಹೆಚ್ಚಿನ ಆಸಕ್ತಿವಹಿಸುತ್ತಿರುವುದು ಕಂಡುಬರುತ್ತಿದೆ. ಇತ್ತೀಚೆಗೆ ಈ ವ್ಯವಸಾಯೋದ್ಯಮದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡತಕ್ಕ ರೈತ ಸಂಘ, ಯುವಕ ಸಂಘಗಳಿಗೆ – ಭಾರತ ಲೋಕಾ ಸೇವಾಸಂಸ್ಥೆ ಮತ್ತು ಭಾರತ ಸೇವಾದಳ ಇತ್ಯಾದಿಗಳಿಗೆ ಗ್ರಾಂಟ್ ಕೊಡುತ್ತಿರುವಂತೆ, ಗ್ರಾಂಟ್ ಕೊಡಬೇಕೆಂಬುದಾಗಿ ಕಳೆದ ವರ್ಷವೇ ತೀರ್ಮಾನಕ್ಕೆಗೊಳ್ಳಲಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಯಾರಿಗೂ ತೊಂದರೆ ಮಾಡಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ನೀಡತಕ್ಕ 5 ಲಕ್ಷರೂಪಾಯಿಗಳ ಸಹಾಯದ ವಿಚಾರ ವೇನಾಗಿದೆ ?

ಶ್ರೀ ಎಚ್. ರಾಚಯ್ಯ.—ಈಗಾಗಲೆ ನಾವು ಒಂದು ರೈತ ಸಂಘಕ್ಕೆ ಒಂದು ಕಟ್ಟಡ ಮುಫತ್ತಾಗಿ ಕಟ್ಟಿಸಿ ಕೊಟ್ಟಿದ್ದೇವೆ. ತಾವೀಗ ಎಲ್ಲರೂಕೊಟ್ಟಿರುವ ನಲಹೆಗಳೇನಿವೆ ಅವುಗಳನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂಬ ಭರವಸೆಯನ್ನು ಮಾತ್ರ ಕೊಡಬಲ್ಲೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹಾಗಾದರೆ ತುಮಕೂರು ಜಿಲ್ಲೆಗೇಕೆ ಆ ಸಹಾಯವನ್ನು ನೀಡಿಲ್ಲ ?

ಶ್ರೀ ಎಚ್. ರಾಚಯ್ಯ.—ಅಲ್ಲಿಗೂ ಕೊಡುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಜಿಲ್ಲೆಗೆ 50 ಸಾವಿರ ರೂಪಾಯಿಗಳು ಕಟ್ಟಡ ಮಂಡ್ಯಕ್ಕಾಗಿ ಕೇಳಿದ್ದರಲ್ಲ ಏನಾಯಿತು ?

ಶ್ರೀ ಎಚ್. ರಾಚಯ್ಯ.—ಅದು ಯಾವ ಇಲಾಖೆಗೆ ಸೇರಿದ್ದೋ ಗೊತ್ತಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇನೆ. ಅಲ್ಲಿ ಆಗದಿದ್ದರೆ ಬೇರೆ ಕಡೆ ಜಾಗಕೊಡಲಾಗುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣ (ತುಮಕೂರು).—ಈ ಟ್ಯಾಕ್ಟರುಗಳ ವಿಚಾರದಲ್ಲಿ ಎಷ್ಟೆಷ್ಟು ಅನ್ಯಾಯಗಳು ನಡೆಯುತ್ತಿವೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೇನು ? ಕೊಳ್ಳತಕ್ಕ ಟ್ರಾಕ್ಟರುಗಳ ಮೇಲೆ ಟಾಕ್ಸ್ ಹಾಕಬಾರದೆಂದು ತೀರ್ಮಾನವಾಗಿದೆ. ಆ ಪೆಟ್ಟಿ ಕಂಪೆನಿಯವರು ಜನರಿಂದ ಈ ಟ್ಯಾಕ್ಸನ್ನು ವಸೂಲು ಮಾಡಿ ಮಧ್ಯೇ ಇರತಕ್ಕ ಜನರು ತಿಂದು ಹಾಕುತ್ತಿದ್ದಾರೆಂದು ಕಂಪ್ಲೆಂಟ್ ಮಾಡಿಲ್ಲವೇ? ಹೀಗೇ ಇನ್ನೂ ಅನೇಕ ನಮೂನೆಯ ಬ್ಲಾಕ್‌ಮಾರ್ಕೆಟ್, ಎಸ್‌ಮ್ಯಾನೇಜ್‌ಮಂಟುಗಳೆಲ್ಲ ನಡೆಯುತ್ತಿವೆ. ಹಿಗಾಗೇ ಕೇಂದ್ರ ಸರ್ಕಾರದವರು ಈ ದಿವಸ ನಮ್ಮ ರಾಜ್ಯ ಸರ್ಕಾರದವರನ್ನು ಬಹಳ ತಿರಸ್ಕಾರ ಭಾವನೆಯಿಂದ ನೋಡುತ್ತಿದ್ದಾರೆ. ನನಗೆ 4 ವರ್ಷಗಳಿಂದಲೂ ಒಂದು ಟ್ರಾಕ್ಟರನ್ನು ಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರದವರಿಗೆ ನಮ್ಮ ಸರ್ಕಾರದವರು ಈ 15% ಟ್ಯಾಕ್ಸನ್ನು ಟ್ರಾಕ್ಟರುಗಳ ಬಗ್ಗೆ ಹಾಕಬಾರದೆಂದು ಏಕೆ ಹೇಳಬಾರದು ?

ಶ್ರೀ ಎಚ್. ರಾಚಯ್ಯ.—ಮಾನ್ಯ ಸದಸ್ಯರೊಬ್ಬರು ಟ್ರಾಕ್ಟರ್ ಕೊಳ್ಳಲು ಅರ್ಜಿದಾರರಾಗಿದ್ದು ಅದು ಸಿಕ್ಕಲಿಲ್ಲವೆಂಬ ಕೋಪದ ಮೇಲೆ ಹೀಗೆಲ್ಲ ಮಾತನಾಡಬಾರದು. ಕೇಂದ್ರಸರ್ಕಾರ ನಮ್ಮ ಸರ್ಕಾರವನ್ನು ಎಂದೂ ತಿರಸ್ಕಾರ ಭಾವನೆಯಿಂದ ಕಂಡಿಲ್ಲ. ನಾವು ಎಂದಿಗೂ ಈ ವಿಚಾರದಲ್ಲಿ ಹಾಗೆ ಮುಂದಾಗಿಗಳಾಗಿ ವರ್ತಿಸುತ್ತಿಲ್ಲ. ಈ ಟ್ರಾಕ್ಟರುಗಳು ಪರದೇಶದಿಂದ ಬರಬೇಕಾಗಿದೆ. ಫಾರಿನ್ ಎಕ್ಸ್‌ಚೇಂಜ್ ತೊಂದರೆ ಬೇರೆಇದೆ. ಯಾವ ಮಿಸ್ ಮ್ಯಾನೇಜ್‌ಮೆಂಟಿಗೂ ಅವಕಾಶವಿಲ್ಲದಂತೆ ನಾವು ಇವುಗಳನ್ನು ಹಂಚಿದ್ದೇವೆ. ಟ್ಯಾಕ್ಸ್ ವಿಚಾರದಲ್ಲಿ ಲೋಪಗಳಾಗಿದ್ದರೆ ಅದನ್ನು ವಿಚಾರ ಮಾಡುತ್ತೇನೆ. ಆದರೆ ನಮ್ಮ ಪ್ರಯತ್ನಗಳೆಲ್ಲ ವಿಫಲವಾಗಿರುತ್ತವೆಂದು ಹೇಳಿದ್ದು ಸರಿಯಲ್ಲ. ನಮ್ಮ ಇರಾಖಾ ಅಧಿಕಾರಿಗಳ್ಯಾರೂ ರಾಜಕೀಯದಲ್ಲಿ ಪ್ರವೇಶಿಸಿಲ್ಲ. ನಮ್ಮ ರಾಜ್ಯ ಈ ಬಾಬುಗಳಲ್ಲಿ. ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ನಾವು ದಕ್ಷತೆಯಿಂದ, ನಿಸ್ಪೃಹತೆಯಿಂದ ಕೆಲಸ ಮಾಡಿದ್ದೇವೆ.

ಶ್ರೀ ಆಲೂರು ಹನುಮಂತಪ್ಪ.—ಪ್ರತಿಯೊಂದು ಜಿಲ್ಲೆಯಲ್ಲರತಕ್ಕ ಅಸಿಸ್ಟೆಂಟ್ ಡೈರೆಕ್ಟರ್ ಮುಂತಾದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಒಂದೊಂದು ವ್ಯಾನನ್ನೋ ಅಥವಾ ಜೀಪನ್ನೋ ಒದಗಿಸಬೇಕೆಂದು ಮನವಿಗಳು ಬಂದುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಎಚ್. ರಾಚಯ್ಯ.—ಆ ವಿಷಯವನ್ನು ಸಹಮುಂದೆ ತಿಳಿಸುತ್ತೇನೆ. ರಾಷ್ಟ್ರೀಯ ವಿಸ್ತರಣೆಯ ಯೋಜನೆಯಪ್ರಕಾರ ಶೇಕಡ 80 ಭಾಗದಷ್ಟು ವ್ಯವಸಾಯ ಮತ್ತು ಪ್ರಾಣಿ ಸಂಪತ್ತು ಅಭಿವೃದ್ಧಿಗೆ ನಿಗಾ ಕೊಡಬೇಕೆಂದು ಹೇಳಿದ್ದರಿಂದ ಬಿ.ಡಿ.ಓ. ಅವರಿಗೆ ಜೀಪುಗಳನ್ನು ಒದಗಿಸಿದ್ದೆವು. ಅವರು ಅವನ್ನು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದಾರೆ. ಈಗ ಜಿಲ್ಲಾ ಮಟ್ಟದ ಅಧಿಕಾರಿಗಳು ನಮಗೆ ವ್ಯಾನುಗಳ ಸೌಕರ್ಯ ವಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ. ಸರ್ಕಾರದವರು ಕೂಡ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಾಹನಗಳನ್ನು ಕೊಡುವುದು ಸೂಕ್ತವೆಂದು ಈಗಾಗಲೇ ಯೋಚನೆಮಾಡುತ್ತಿದ್ದಾರೆ ಮತ್ತು ಅದನ್ನು ಪರಿಶೀಲಿಸುತ್ತಿದ್ದಾರೆ. ಅದಕ್ಕಾಗಿ ರ್ಯಾಂಡ್ ಮತ್ತು ಪ್ಯಾಯಂಟ್ ಪ್ರೊಟೆಕ್ಷನ್ ಇಲಾಖೆಯವರು ಪ್ರಚಾರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಂದು ಹೇಳುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಆ ಬಗ್ಗೆ ಏನಾದರೂ ಸೂಕ್ತಕ್ರಮವನ್ನು ತೆಗೆದುಕೊಂಡು ಪರಿಶೀಲನೆ ಮಾಡುತ್ತಿದ್ದೀರಾ ?

1-00 P.M.

ಶ್ರೀ ಎಚ್. ರಾಚಯ್ಯ.— ಇನ್ನು ವೆಟರಿನರಿ ಮತ್ತು ಎನಿಮಲ್ ಹಸ್ಬೆಂಡರಿ ಇಲಾಖೆಗಳ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು, ಸರ್ಕಾರ ಆ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ಶ್ರೀಮಾಕ್ ಶ್ರೀನಿವಾಸ ಶೆಟ್ಟರು ಈ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಅಂದರೆ ಕೃತಕ ಗರ್ಭಧಾರಣೆಯ ವಿಷಯದಲ್ಲಿ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ವಾದಿಸಿದರು. ಈಗಾಗಲೇ ಸುಮಾರು 83 ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ ಮತ್ತು ಸಬ್ ಸೆಂಟರ್ಸನ್ನು ಪ್ರಾರಂಭಮಾಡಿದ್ದೇವೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—19 ಜಿಲ್ಲೆಯೊಳಗೇ.

ಶ್ರೀ ಎಚ್. ರಾಚಯ್ಯ.—ವ್ಯವಸಾಯ ಇಲಾಖೆ ಮತ್ತು ವೆಟರಿನರಿ ಇಲಾಖೆಗಳಿಂದ ಕಳೆದ 3 ವರ್ಷಗಳಲ್ಲಿ ತಮ್ಮ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ಅನುಕೂಲವಾಗಿದೆಯೆಂಬುದನ್ನು ವಿಚಾರಮಾಡಿ ನೋಡಬೇಕೆಂದು ಹೇಳುತ್ತೇನೆ. ಅದಕ್ಕೆ ಹಿಂದೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈ ಇರಾಖೆಯ ಮೂಲಕ ಎಷ್ಟರಮಟ್ಟಿಗೆ ಆ ಸೌಕರ್ಯಗಳಿದ್ದುವು; ಈಗ ಕಳೆದ 3 ವರ್ಷಗಳಿಂದ ಎಷ್ಟರಮಟ್ಟಿಗೆ ಅಲ್ಲಿ ಸೌಲಭ್ಯಗಳಾಗಿವೆಯೆಂಬುದನ್ನು

(ಶ್ರೀ ಎನ್. ರಾಚಯ್ಯ)

ಮಾನ್ಯಸದಸ್ಯರು ಗಮನಿಸಬೇಕು. ಇನ್ನು 20 ವರ್ಷ ಗಳಲ್ಲಿ ಆಗುತ್ತಿದ್ದಂಥ ಅನುಕೂಲಗಳನ್ನು ಕಳೆದ 3 ವರ್ಷಗಳಲ್ಲಿಯೇ ಅವರ ಕ್ಷೇತ್ರದಲ್ಲಿ ಒದಗಿಸಿದೆ ಎಂದು ನಾನು ನಿಸ್ಸಂದೇಹವಾಗಿ ಈ ಸಂದರ್ಭದಲ್ಲಿ ಹೇಳ ಬೇಕಾಗಿದೆ.

ಇನ್ನೊಂದು ವಿಷಯ. ಈಗ ಎಲ್ಲಾ ಕಡೆಯಲ್ಲೂ ದನಗಳ ಆಸ್ಪತ್ರೆಗಳನ್ನು ಮಾಡಿದ್ದೇವೆ. ಅವನ್ನು ಇನ್ನೂ ಅಪ್‌ಗ್ರೇಡ್ ಮಾಡಬೇಕೆಂಬ ಮನಸ್ಸು ಸರ್ಕಾ ರಕ್ಕೆ ಪೂರ್ಣವಾಗಿದೆ. ಆದುದರಿಂದ ಯಾವ ಸಂಸ್ಥಾನ ದಲ್ಲಿಯೂ ಇಲ್ಲದಷ್ಟು ರೀತಿಯಲ್ಲಿ ಈಗಾಗಲೇ ಈ ಬಗ್ಗೆ ಇಲ್ಲಿ ಕೆಲಸಮಾಡಿದೆ. ಈಗ ಸುಮಾರು 475 ಆಸ್ಪತ್ರೆಗಳನ್ನು ನಮ್ಮ ಸಂಸ್ಥಾನದಲ್ಲಿಟ್ಟುಕೊಂಡಿ ದ್ದೇವೆ. 25 ಸಾವಿರ ದನಗಳಿವೆ. 25 ಸಾವಿರ ಜಾನು ವಾರುಗಳಿಗೆ ಒಂದು ಆಸ್ಪತ್ರೆಯನ್ನು ಕೊಟ್ಟಿದ್ದೇವೆ. ಕಳೆದವರ್ಷ 40 ಆಸ್ಪತ್ರೆಗಳನ್ನು ಕೊಟ್ಟಿದ್ದೇವೆ. ಕಳೆದ ವರ್ಷ 40 ಆಸ್ಪತ್ರೆಗಳನ್ನು ಕೊಟ್ಟಹಾಗೆ ಈ ವರ್ಷ ದಲ್ಲಿಯೂ 40 ವೆಟರಿನರಿ ಆಸ್ಪತ್ರೆಗಳನ್ನು ಕೊಡಬೇ ಕೆಂಬ ಯೋಚನೆ ಇದೆ. ಕಳೆದ 3 ವರ್ಷಗಳಲ್ಲಿ 40 ಆಸ್ಪತ್ರೆಗಳನ್ನು ಮಂಜೂರು ಮಾಡಿದ್ದೇವೆ. ಎಲ್ಲೆಲ್ಲಿ ಈ ಆಸ್ಪತ್ರೆಗಳು ಬೇಕುಎಂಬುದಕ್ಕೆ ನಮಗೆ ಸ್ಥಳೀಯ ಅಧಿಕಾರಿಗಳಿಂದ ಶಿಫಾರ್ಸು ಬಂದ ಮೇಲೆ ಅದನ್ನು ಮಾಡುತ್ತಿದ್ದೇವೆ. ಅವರ ಯೋಜನೆಯ ಪ್ರಕಾರ 40 ವೆಟರಿನರಿ ಆಸ್ಪತ್ರೆಗಳನ್ನು ಈ ವರ್ಷ ಕೊಡಲು ಈಗಾಗಲೇ ಮಂಜೂರುಮಾಡಿದ್ದೇವೆ.

ಈಗ ಇನ್ನೂ ಹೆಚ್ಚಿಗೆ ಮುತುವರ್ಜಿಯಿಂದ ವೆಟರಿ ನರಿ ಇರಾಖೆ ಕೆಲಸ ಮಾಡಬೇಕಾಗಿದೆ. ಈಗ ವೆಟರಿ ನರಿ ಕಾಲೇಜಿನಲ್ಲಿ ಈಗಾಗಲೇ ಎರಡು ಮೂರನೆಯ ವರ್ಷದಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡು ತ್ತಿದ್ದಾರೆ. 1962 ನೆಯ ಇಸವಿಯ ಹೊತ್ತಿಗೆ ಅಲ್ಲಿ ಡಾಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರನ್ನೇ ನೇಮಿಸಬೇಕೆಂಬ ಅಭಿಪ್ರಾಯ ಸರಕಾರಕ್ಕಿದೆ. ನಮಗೆ ಆಗ ಫಸ್ಟ್‌ಬ್ಯಾಚ್‌ನವರು ಸಿಕ್ಕುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 40 ಆಸ್ಪತ್ರೆ ಗಳನ್ನು 60-61ನೆಯ ಸಾಲಿನಲ್ಲಿ ಮಾಡಿದ್ದೀರಾ?

ಶ್ರೀ ಎಚ್. ರಾಚಯ್ಯ.—ಸರ್ಕಾರದವರು ಆ ರೀತಿ ಮಂಜೂರು ಮಾಡಬಹುದು. ಹಣಮಾತ್ರ ಅಪ್ರೊಪ್ರಿ ಯೇಷ್ನ್ ಆಗುವವರೆಗೆ ಹಣ ಒದಗಿಸುವುದಕ್ಕಾಗು ವುದಿಲ್ಲ. ಅಪ್ರೊಪ್ರಿಯೇಷ್ನ್ ಯಾವಾಗ ಆಗುತ್ತದೋ ಆಗ ಹಣ ಮಂಜೂರು ಮಾಡಬಹುದು ಆದರೆ ಹಣ ವನ್ನು ಆಗ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—40 ಆಸ್ಪತ್ರೆಗಳಲ್ಲಿ ಜಿಲ್ಲಾವಾರು ಯಾವು ಯಾವುವು?

ಶ್ರೀ ಎಚ್. ರಾಚಯ್ಯ.—ಅದನ್ನೇ ತಪ್ಪಿಲ್ಲದೆ ಕೇಳಿದ್ದಾರೆ. ಎಲ್ಲೆಲ್ಲಿ ಅವಶ್ಯಕ ಇದೆಯೋ ಅಂತಹ ಕಡೆ ಅವನ್ನು ಕೊಡುತ್ತಿದ್ದೇವೆ. ಕಳೆದ ಒಂದು ವಾರ ದಲ್ಲಿಯೇ ಗಾಡಹಳ್ಳಿ ಮೂಗೂರು, ಹುಡಿಗಾಲ್-ಇವುಗಳಿಗೆ ಆಸ್ಪತ್ರೆಗಳನ್ನು ಕೊಟ್ಟಿದ್ದೇವೆ.

ಇನ್ನೊಂದು ವಿಷಯ. ಕೆಲವು ಮಾನ್ಯಸದಸ್ಯರು ಒಳ್ಳೆಯ ಹಸುಗಳನ್ನು, ದನಗಳನ್ನು ಗ್ರಾಮಾಂತರ ದಲ್ಲಿರುವವರಿಗೆ ಒದಗಿಸುವುದಿಲ್ಲವೆಂದು ಹೇಳಿದರು. ಹಸುಗಳನ್ನೊದಗಿಸುವುದು, ದನಗಳನ್ನೊದಗಿಸುವುದು ಸರ್ಕಾರದ ಒಂದು ಕೆಲಸವಲ್ಲ. ನಾವು ಹಾಗೆ ಎಂದಿಗೂ ಹೇಳಲಿಲ್ಲ. ಆದರೆ ಇತರೇ ಜಾತಿಯ ಹಸುಗಳನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ಆರ್ ಇಂಡಿಯಾ ಕ್ಯಾಟಲ್‌ಫೋ ವರ್ಗದವರು ಪಂಜಾಬ್ ಮುಂತಾದ ಕಡೆಗಳಲ್ಲಿ ಸ್ಟೆರ್ಲಾಕ್ಯಾಟಲ್ ಆಗಿರತಕ್ಕದ್ದನ್ನು ಅದರಲ್ಲೂ ಅವರಿಗೆ ಅವು ಯಾವ ಒಂದು ಉಪಯೋಗಕ್ಕೆ ಬಾರದೇ ಇರುವಂಥಾದ್ದನ್ನು ತರಿಸಿಕೊಂಡು ಎಲ್ಲೆಲ್ಲಿ ರೈತ ಬಾಂಧವರು ದನಗಳನ್ನು ಚೆನ್ನಾಗಿ ಸಾಕುತ್ತಾರೋ, ಅವನ್ನು ಚೆನ್ನಾಗಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೋ ಅಂತಹ ಕಡೆಗಳಲ್ಲಿ ಪ್ರತ್ಯೇಕವಾಗಿ ಸ್ವಂತವಾಗಿ ಅರ್ಜಿ ಹಾಕಿ ಕೊಂಡಮೇಲೆ ಕೇಂದ್ರ ಸರ್ಕಾರದ ಸಂಸ್ಥೆ ಯವರು ಅವನ್ನು ಕೊಡುತ್ತಿದ್ದಾರೆಯೇ ಹೊರತು ರಾಜ್ಯ ಸರ್ಕಾರದವರು ಅವನ್ನು ಕೊಡುತ್ತಿಲ್ಲ. ಆದ್ದ ರಿಂದ ಮಾನ್ಯ ಸದಸ್ಯರ ಆರೋಪಣೆ ಸರಿಯಾಗಿಲ್ಲ ವೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಚಾರ. ಈಗ ಕೀ ವಿಲೇಜ್ ಸ್ಕೀಂ ಎಂದು ಮಾಡುತ್ತಿದ್ದೇವೆ. 1960 ನೆಯ ವರ್ಷದಲ್ಲಿ ನಾಲ್ಕು ಹೊಸದಾಗಿ ಅವನ್ನು ಪ್ರಾರಂಭ ಮಾಡಬೇಕೆಂದು ಯೋಚನೆ ಇಟ್ಟುಕೊಂಡಿದ್ದೇವೆ. ಇನ್ನು ಪಶುವೈದ್ಯ ಡೆವಲಪ್‌ಮೆಂಟ್ ಸ್ಕೀಂನಲ್ಲಿ ಎಂಟು ಎಕ್ಸ್‌ಟೆರ್ಷ್ನ್ ಸೆಂಟರುಗಳನ್ನು ಮಾಡಿಕೊಂಡಿ ದ್ದೇವೆ. ಇದಲ್ಲದೆ ಫ್ರೀಬುಲ್ ಸ್ಕೀಂ ಎಂಬುದನ್ನು ಮಾಡಿದ್ದೇವೆ. ಆ ಸ್ಕೀಂ ಪ್ರಕಾರ ಮುಫತ್ತಾಗಿ ಹೋರಿ ಗಳನ್ನು ರೈತ ಬಾಂಧವರಿಗೆ ಹಂಚುತ್ತೇವೆ. ಕಳೆದ ವರ್ಷ 100 ಗೂಳಿಗಳನ್ನು ಹಂಚಿದ್ದೇವೆ. ಈ ವರ್ಷ ಮತ್ತೆ 100 ಗೂಳಿಗಳನ್ನು ಹಂಚಬೇಕೆಂದಿದ್ದೇವೆ. ಈ ಗಾಗಲೇ ಈ ಸ್ಕೀಮಿನಲ್ಲಿ 75 ಜನ ಟ್ರೈನಿಂಗ್ ಪಡೆ ದಿದ್ದಾರೆ. ಈ ವರ್ಷ ಮತ್ತೆ 75 ಜನ ಟ್ರೈನಿಂಗ್ ಪಡೆಯುತ್ತಿದ್ದಾರೆ, ಪಡೆಯುವವರಾಗಿದ್ದಾರೆ. ಇನ್ನೂ ಹೆಚ್ಚಿನ ಜನ ಇದರಲ್ಲಿ ತರಬೇತು ಹೊಂದಿ ಅಭಿವೃದ್ಧಿ ಯಾಗಬೇಕೆಂಬ ಉದ್ದೇಶದಿಂದ ರಾಜ್ಯ ಸರ್ಕಾರ ದವರು ಲೈವ್‌ಸ್ಟಾಕ್ ಫಾರಮ್ಸ್ ರಿ-ಆರ್ಗನೈಜೇಷ್ನ್ ಕಮಿಟಿ ಎಂದು ರಚನೆ ಮಾಡಿದ್ದಾರೆ. ಆ ಕಮಿಟಿ ಯಿಂದ ಈಗಾಗಲೇ ಸರ್ಕಾರಕ್ಕೆ ವರದಿ ಬಂದಿದೆ. ಆ ವರದಿಯ ಪ್ರಕಾರ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿ ವೃದ್ಧಿ ಮಾಡುತ್ತಿದ್ದೇವೆ. ಈ ಅನಿಮಲ್ ಹಸ್ಬೆಂಡ್ರಿ ಇಲಾಖೆಯ ವಿಚಾರವಾಗಿ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಏನು ಹೇಳಿ ದ್ದಾರೋ ಅದನ್ನು ರಾಜ್ಯ ಸರ್ಕಾರದವರು ಒಪ್ಪಿ ಇದಕ್ಕೆ ಮುಂದಿನ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹೈಯರ್ಸ್ಟ್ ಪ್ರಯಾರಿಟಿಯನ್ನು ಕೊಟ್ಟಿದೆ. ಆ ಪ್ರಕಾರ ಪ್ರಾಣಿ ಸಂಪತ್ತನ್ನು ಹೆಚ್ಚು ಅಭಿವೃದ್ಧಿ ಮಾಡುವ ಕಡೆ ರಾಜ್ಯ ಸರ್ಕಾರ ತನ್ನ ದೃಷ್ಟಿ ಯನ್ನು ಕೊಡಬೇಕೆಂದು ಮನಸ್ಸು ಮಾಡಿದೆ. ಆದರೆ, ಶ್ರೀಮಾನ್ ಶ್ರೀನಿವಾಸಶೆಟ್ಟರು ಹೇಳಿದಂತೆ ನಮಗೆ ಸಿಬ್ಬಂದಿಯ ಕೊರತೆ ಈಗ ಹೆಚ್ಚಾಗಿದೆ. ಅಲ್ಲದೆ ಈಗ 250 ಕೆಲಸಗಳು ನಮ್ಮ ಇಲಾಖೆಯಲ್ಲಿ ಖಾಲಿ ಇವೆ. ವೆಟರಿನರಿ ಕಾಲೇಜಿಗೆ ಡೈರೆಕ್ಟರ್ ಆಗಿರು ವವರು ಪ್ರಿನ್ಸಿಪಾಲ್ ಆಗಿರಬೇಕೆಂದಿದೆ. ಅದಕ್ಕೋಸ್ಕರವಾಗಿ ವೆಟರಿನರಿ ಕಾಲೇಜಿಗೂ ಪ್ರತ್ಯೇಕ ವಾಗಿ ಒಬ್ಬ ಇಂಡಿಪೆಂಡೆಂಟ್ ಆಫೀಸರನ್ನು ಪ್ರಿನ್ಸಿ ಪಾಲರಾಗಿ ನೇಮಕ ಮಾಡಬೇಕು ಎಂದು ಸರ್ಕಾರದ ಯೋಚನೆ ಇದೆ. ಬೆಂಗಳೂರಿನಲ್ಲಿ ಒಂದು ಕೋಟಿ ರೂಪಾಯಿಗಳ ಖರ್ಚಿನಲ್ಲಿ ಹಾಲನ್ನು ಸರಬರಾಜು ಮಾಡುವ ಒಂದು ಸ್ಕೀಮನ್ನು UNICEF ಸಂಸ್ಥೆ ಯವರು ಮಾಡಿದರು. ಆ ಪ್ರಕಾರ ಇಲ್ಲಿ ಒಂದು ಮಿಲ್ಕ್ ಬೋರ್ಡನ್ನು ರಚನೆ ಮಾಡಿ ಅದಕ್ಕೆ ಒಬ್ಬ ತಜ್ಞರಾದಂಥ ಆಫೀಸರನ್ನು ನೇಮಕ ಮಾಡಬೇಕು. ಒಬ್ಬ ಪ್ರಾಜೆಕ್ಟ್ ಇಂಜಿನಿಯರನ್ನು ನೇಮಿಸಬೇಕು, ಒಬ್ಬ ಐ. ಎ. ಎಸ್. ಆಫೀಸರನ್ನು ನೇಮಿಸಬೇಕು,

ಈ ರೀತಿಯಾಗಿ ಸುವ್ಯವಸ್ಥೆ ಮಾಡಬೇಕಾಗಿದೆ. ಹೀಗೆ ಈ ಹಾಲಿನ ನರಬರಾಜು ಯೋಜನೆಯನ್ನು ಯಶಸ್ವಿಯಾಗಿ ಮಾಡಬೇಕೆಂದು UNICEF ಅವರು ಈಗಾಗಲೇ ಬೆಂಗಳೂರಿನಲ್ಲಿದ್ದಾರೆ. ಅವರಿಗೆ ತಕ್ಕ ಸಿಬ್ಬಂದಿಯನ್ನು ಸರ್ಕಾರದವರು ಒದಗಿಸಿ ಕೊಡಬೇಕೆಂದು ಇದ್ದಾರೆ. ಕೇವಲ ಒಂದು ವಾರದಲ್ಲಿ ಈ ಯೋಜನೆಗೆ ಅನುಸಾರವಾಗಿ ಒಬ್ಬ ಪ್ಯಾಜೆಕ್ಟ್ ಆಫೀಸರನ್ನು, ಪ್ಯಾಜೆಕ್ಟ್ ಇಂಜಿನಿಯರನ್ನು ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಿಸಬೇಕೆಂದು ಸರ್ಕಾರದ ಆಲೋಚನೆ ಇದೆ. ಸುಮಾರು 3 ಲಕ್ಷ ಪೌಂಡು ಹಾಲನ್ನು ಬೆಂಗಳೂರು ನಗರಕ್ಕೆ ನರಬರಾಜು ಮಾಡಬೇಕಾಗಿದೆ. ಈಗ 20 ಸಾವಿರ ಪೌಂಡಿನಷ್ಟು ಹಾಲನ್ನು ಬೆಂಗಳೂರಿನಲ್ಲಿ ನರಬರಾಜು ಮಾಡುತ್ತಿದ್ದೇವೆ. ನಮ್ಮ ಬೆಂಗಳೂರು ಜನತೆಗೆ ಸುಮಾರು 3 ಲಕ್ಷ ಪೌಂಡುಗಳಷ್ಟು ಹಾಲು ನರಬರಾಜು ಆಗಬೇಕಾಗಿದೆ. ಇದನ್ನು ಬಹು ಜಾಗ್ರತಿಯಿಂದ ಮತ್ತು ಬಹು ಜರೂರಾಗಿ ನಡೆಸಬೇಕೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಆಲೂರು ಹನುಮಂತಪ್ಪ.—ಇದು ಬಹಳ ಮುಖ್ಯವಾದ ಪ್ರಶ್ನೆ. ಇನ್ನೆಷ್ಟು ದಿವಸಗಳೊಳಗೆ ಈ ಯೋಜನೆ ಕಾರ್ಯರೂಪಕ್ಕೆ ಬರುತ್ತದೆ?

ಶ್ರೀ ಎಚ್. ರಾಚಯ್ಯ.—ಆ ವಿಷಯವನ್ನು ಮಾನ್ಯ ಸದಸ್ಯರು ತಿಳಿಯಬೇಕಾದರೆ ನನ್ನ ಚೇಂಬರಿಗೆ ಬಂದರೆ, ಆ ಯೋಜನೆಯ ಪ್ರತಿಯನ್ನೇ ಕೊಡುತ್ತೇನೆ, ಆಯೋಜನೆಯನ್ನು ನಮ್ಮ ಇಂಜಿನಿಯರ್ ಮತ್ತು UNICEF ಅಥಾರಿಟೀಸ್ ಅವರು ಸೇರಿ ಮಾಡುತ್ತಿದ್ದಾರೆ. ಅವರು ಆ ಒಂದು ಟಾರ್ಜೆಟ್ಟನ್ನು ಯಾವಾವ ಪೀರಿಯಡ್ಡಿನಲ್ಲಿ ಮಾಡಬೇಕೋ ಆ ಪ್ರಕಾರ ಮಾಡುತ್ತಿದ್ದಾರೆ.

ಹಾಗೆ ಮಾಡುವಾಗ ಅದಕ್ಕೆ ಸುಮಾರು 25 ಎಕರೆ ಜಮೀನು ಬೇಕಾಗಿದೆ, ಅಷ್ಟು ಜಮೀನನ್ನು ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿದ್ದೇನೆ. ಈ ಕಾರ್ಯಾಚರಣೆ ಜಾಗ್ರತೆ ನಡೆಯುತ್ತಿದೆ. UNICEF ನವರು ಈಗಲೇ ಇದರ ಏರ್ಪಾಡು ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಈ ಬಗ್ಗೆ ಯಾವ ಯಾವ ಕಾಲದಲ್ಲಿ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ಇನ್ನು ಎರಡು ವರ್ಷಗಳಲ್ಲಿ ಆಗುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಇಂಡಿಯಾ ದೇಶದ ಇತರ ರಾಜ್ಯಗಳಿಂದ ಒಳ್ಳೆಯ ಹಸುಗಳನ್ನು ತರಿಸಿ ನಮ್ಮ ರಾಜ್ಯದ ಎಲ್ಲ ಭಾಗಗಳಿಗೂ, ಅದರಲ್ಲಿಯೂ ಮೊದಲು ಬೆಂಗಳೂರು, ತುಮಕೂರು ಜಿಲ್ಲೆಗಳಿಗೆ ಒದಗಿಸುವುದು ಹಾಲಿನ ಉತ್ಪತ್ತಿ ಹೆಚ್ಚುಮಾಡುವ ದೃಷ್ಟಿಯಿಂದ ಒಳ್ಳೆಯದಲ್ಲವೆ?

ಶ್ರೀ ಎಚ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ಕಾರ್ಯವನ್ನು ಕೇಂದ್ರ ಸಮಿತಿಯವರು ಮಾಡುತ್ತಿದ್ದಾರೆ, ಯಾವ ಯಾವ ರೈತರು ಒಳ್ಳೆಯ ತಳಿ ಬೇಕೆಂದು ಹೇಳುತ್ತಾರೋ ಅವರು ಅಲ್ಲಿಂದ ತರಿಸಿಕೊಳ್ಳಬಹುದು. Local breed ದನಗಳನ್ನೇ upgrade ಮಾಡಲು ಪ್ರಯತ್ನ ಮಾಡುತ್ತೇವೆಂದರೆ, ನಮ್ಮ ಡೈರಿಫಾರಂಗಳಲ್ಲಿ ಉತ್ತಮ ತರಹ ಹೋರಿಗಳಿವೆ. ಅವುಗಳ ವೀರ್ಯವನ್ನು ನರಬರಾಯಿ ಮಾಡಿ, ಬೆಂಗಳೂರಿನ ಸುತ್ತಮುತ್ತ ನಲವತ್ತುಮೈಲಿ ಪ್ರದೇಶದಲ್ಲಿ ರೈತರು ಅದನ್ನು ಉಪಯೋಗ ಮಾಡಿಕೊಂಡು ತಳಿ ಅಭಿವೃದ್ಧಿಪಡಿಸಿ, ಹೆಚ್ಚು ಹಾಲು ಒದಗುವಂತೆ ಏರ್ಪಾಡುಮಾಡುವ ಉದ್ದೇಶವಿದೆ. ಇದರಿಂದ ರೈತರಿಗೆ ಅನುಕೂಲವಾಗುವುದಲ್ಲದೆ ಇಡಿಯ ಬೆಂಗಳೂರು ನಗರದ ಜನರಿಗೆ ಸುಲಭ ದರದಲ್ಲಿ ಉತ್ತಮ ಹಾಲು ದೊರೆಯುತ್ತದೆ. ಅದರಲ್ಲಿಯೂ ಬಡವರಿಗೆ ರಿಯಾಯಿತಿ ಕೊಡುವ ವಿಚಾರ ಇರುವುದರಿಂದ ತುಂಬ ಅನುಕೂಲವಾಗುತ್ತದೆ.

ಶ್ರೀ ಎಫ್. ಎಚ್. ಮೊಹಸೀನ್ (ಹುಬ್ಬಳ್ಳಿ).—ಹುಬ್ಬಳ್ಳಿ, ಧಾರವಾಡ ನಗರಗಳಲ್ಲಿ ಹಾಲು ನರಬರಾಯಿ ಚೆನ್ನಾಗಿಲ್ಲ. ಇದನ್ನು ನರಿಪಡಿಸಲು ಏನು ಮಾಡುತ್ತೀರಿ?

ಶ್ರೀ ಎಚ್. ರಾಚಯ್ಯ.—ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರ ಪ್ರತಿ ಜಿಲ್ಲೆಯ ಕೇಂದ್ರದಲ್ಲಿಯೂ ಬೆಂಗಳೂರು ಮತ್ತು ಸುತ್ತಮುತ್ತಲೂ ಯಾವ ಏರ್ಪಾಡು ಮಾಡುತ್ತಿದ್ದೇವೋ ಅದೇ ರೀತಿ ಮಾಡಿ ಜಾರಿಗೆ ಕೊಡಬೇಕೆಂಬ ಉದ್ದೇಶವಿದೆ. ಹುಬ್ಬಳ್ಳಿ, ಧಾರವಾಡಕ್ಕೆ ಕೂಡ್ಲಿಗಿಯಲ್ಲಿ ಸಣ್ಣ ಹಾಲಿನ ಕೇಂದ್ರವಿದೆ. ಇದನ್ನು ಇನ್ನೂ ವಿಸ್ತರಿಸಬೇಕು, ಇದಕ್ಕಾಗಿ ಹೆಚ್ಚು ಹಣ ಮತ್ತು ಸಿಬ್ಬಂದಿಯನ್ನೊದಗಿಸಬೇಕೆಂಬ ಉದ್ದೇಶವಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಖಂಡಿತ ಮಾಡುತ್ತೇವೆ.

ಎರಡನೆಯ ಯೋಜನೆಯ ಪ್ರಕಾರ ಭದ್ರಾವತಿಯಲ್ಲಿ ಹಾಲಿನ ಕೇಂದ್ರವನ್ನು ಮಾಡಲು ಈಗಾಗಲೇ ಸರ್ವೆ ನಡೆಸಿ ಅಂಕಿ ಅಂಶಗಳನ್ನು ತೆಗೆದುಕೊಂಡಿದ್ದಾರೆ. ಈ ವರ್ಷದಲ್ಲಿ ಅಲ್ಲಿ ಹಾಲು ನರಬರಾಯಿ ಕೇಂದ್ರವನ್ನು ಏರ್ಪಾಡುಮಾಡಬೇಕೆಂದಿದೆ. Key Village Scheme ಪ್ರಕಾರ 1960–61ರಲ್ಲಿ ನಾವು ಆರು Key Village Schemeಗಳನ್ನು ಮಾಡಬೇಕೆಂದಿದ್ದೇವೆ. ನಾಲ್ಕು Poultry Development schemes ಮಾಡಬೇಕು ನೂರು ಹೋರಿಗಳನ್ನು ನರಬರಾಯಿ ಮಾಡಬೇಕು, ಮತ್ತು ಸಂಸ್ಥಾನದಲ್ಲಿ Cattle Show ಏರ್ಪಾಡು ಮಾಡಬೇಕು ಎಂದಿದ್ದೇವೆ. ದನಗಳ ರೋಗವನ್ನು ತಡೆಗಟ್ಟುವುದಕ್ಕಾಗಿ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಹೆಚ್ಚು ದನಗಳ ಆಸ್ಪತ್ರೆಗಳನ್ನು ಮಾಡಿದ್ದೇವೆ. ಗ್ರಾಮಾಂತರಗಳಲ್ಲಿ 40 ಪಶುವೈದ್ಯ ಆಸ್ಪತ್ರೆಗಳನ್ನು ಏರ್ಪಾಡುಮಾಡಬೇಕೆಂದಿದೆ. ಬೆಂಗಳೂರು ಮತ್ತು ಮಂಗಳೂರಿನಲ್ಲಿ Piggery Development ಯೋಜನೆಯನ್ನು ಪ್ರಾರಂಭಿಸಬೇಕೆಂದಿದೆ. ಕಳೆದ ವರ್ಷ 40 ಕುರಿಗಳ ಫಾರಂಗಳನ್ನು ಮಾಡಿದ್ದೇವೆ, ಹೀಗೆಯೇ ಅಭಿವೃದ್ಧಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದಿದೆ. ನಮ್ಮ ರಾಜ್ಯದಲ್ಲಿ ವ್ಯವಸಾಯ ಮತ್ತು ಪಶುವೈದ್ಯಕಾಲೇಜು ಈ ಎರಡೂ ಇರುವ ಕಾರಣ ಇವಕ್ಕೆ ಸಂಬಂಧಪಟ್ಟ ಹಾಗೆ ಒಂದು ರೂರಲ್ ವಿಶ್ವವಿದ್ಯಾನಿಲಯ ಎನ್ನುವುದನ್ನು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಇದಕ್ಕಾಗಿ American Embassyಯ ತಜ್ಞರು ನಮ್ಮ ಸಂಸ್ಥಾನಕ್ಕೆ ಬಂದಿದ್ದರು. ನೆನ್ನೆಯ ದಿವಸ ಅವರೊಡನೆ ಸಮಾಲೋಚನೆ ಮಾಡಲಾಗಿದೆ. ವೆಟೆರಿನೆರಿ ಮತ್ತು ವ್ಯವಸಾಯದ ಕಾಲೇಜಿನ ಜೊತೆಯಲ್ಲಿ ರೂರಲ್ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಪ್ರಸ್ತಾಪ ಮಾಡಿದ್ದೇವೆ. ಇನ್ನೂ ಆ ಜ್ಞಾರು ತೀರ್ಮಾನವಾಗಿಲ್ಲ. ಅನಿಮಲ್ ಹಸ್‌ಬೆಂಡ್ರಿ ಮತ್ತು ವೆಟೆರಿನೆರಿ ಇಲಾಖೆಯಲ್ಲಿಯೂ ಕೂಡ ಅಧಿಕಾರಿಗಳು ಒಳ್ಳೆಯದಕ್ಷತೆಯಿಂದ, ನಿತ್ಯವಾಗಿ, ಏತರಣಿಯಿಂದ ಕೆಲಸಮಾಡಿದ್ದಾರೆ ಮತ್ತು ಇತರ ಸಂಸ್ಥಾನಗಳಿಗಿಂತಲೂ ನಮ್ಮ ಸಂಸ್ಥಾನದಲ್ಲಿ ಹೆಚ್ಚಿನಮಟ್ಟದಲ್ಲಿ ಪ್ರಗತಿಯನ್ನು ಈ ಇಲಾಖೆಯಲ್ಲಿ ಸಾಧಿಸಿದ್ದೇವೆ. ನಮಗೆ ಸಿಬ್ಬಂದಿಬೇಕಾಗಿದೆ, ವೆಟೆರಿನೆರಿಕಾಲೇಜಿನಲ್ಲಿ ಸ್ನಾತಕ

(ಶ್ರೀ ಎನ್. ರಾಚಯ್ಯ)

ಮೆಕ್ಟ್ರೈನಿಂಗ್ ಕೋರ್ಸಿನಲ್ಲಿಯೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜನರನ್ನು ತರಪೇತುಮಾಡಿ, ತರಪೇತಾದ ಜನರು ಸಿಕ್ಕಿದಹಾಗೆಲ್ಲ ಇನ್ನೂ ಮಂದುವರಿಸಲು ಅವಕಾಶವಿದೆ. ಸಾಧ್ಯವಾದರೆ ಈ ಇಲಾಖೆಯನ್ನು ಪುನರ್ವ್ಯವಸ್ಥೆಮಾಡಿ ಅನಿಮಲ್‌ಹಸ್‌ಬೆಂಡ್ರಿ ಮತ್ತು ವೆಟೆರಿನೆರಿ ಸಂಶೋಧನೆಯನ್ನೇಕೆ ಅಭಿವೃದ್ಧಿ ಮಾಡಬಾರದು ಎಂಬ ಪ್ರಶ್ನೆಯೂ ಸರ್ಕಾರದ ಯೋಚನೆಯಲ್ಲಿದೆ. ಲೈವ್‌ಸ್ಟಾಕ್ ಫಾರಂಗಳನ್ನು ಇನ್ನೂ ಹೆಚ್ಚು ಲಾಭ ಬರುವಂತೆ ನುವ್ಯವಸ್ಥೆಗೊಳಿಸಬೇಕು ಮತ್ತು ಹಾಲಿನ ಸರಬರಾಯಿ ಹೆಚ್ಚಿನಪ್ರಮಾಣದಲ್ಲಾಗುವಂತೆ ಮಾಡಬೇಕೆಂಬ ಉದ್ದೇಶವಿದೆ.

ಶ್ರೀ ಬಿ. ರಾಚಯ್ಯ.—ಪಟ್ಟಣಗಳಲ್ಲದೆ ಹಳ್ಳಿಗಳಲ್ಲಿ ಹಾಲಿನ ಕೇಂದ್ರವನ್ನುಮಾಡಿದ್ದೀರಾ ?

ಶ್ರೀ ಎಚ್. ರಾಚಯ್ಯ.—ಸರ್ಕಾರದ ಧ್ಯೇಯವಾದರೂ ಪ್ರತಿಹಳ್ಳಿಯಲ್ಲಿಯೂ ಹಾಲುಸರಬರಾಯಿ ಆಗಬೇಕೆಂಬುದು. ಮೊದಲು ಪಟ್ಟಣಗಳ ಅಕ್ಕಪಕ್ಕದಲ್ಲಿರುವ ಹಳ್ಳಿಗಳಿಗೆ ಸಾಧ್ಯವಾದರೆ ಮಾಡುತ್ತೇವೆ. ಈಗ ಬೆಂಗಳೂರು ನಗರದಲ್ಲಿ ಹೆಚ್ಚುಮಾಡಿ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿ ಜಿಲ್ಲಾ ಹೆಡ್ ಕ್ವಾರ್ಟರಿನಲ್ಲಿಯೂ ಮಾಡಿ ಆ ಮೇಲೆ ತಾಲ್ಲೂಕು ಮತ್ತು ಗ್ರಾಮಗಳಲ್ಲಿಯೂ ವಿಸ್ತರಿಸಬೇಕೆಂಬ ಆಶೆ ಇದೆ.

ಶ್ರೀ ಬಿ. ರಾಚಯ್ಯ.—ಪಾನನಿರೋಧವನ್ನು ಎಲ್ಲೆಲ್ಲಿ ಜಾರಿ ಮಾಡಿದ್ದಾರೋ ಅಲ್ಲಿ ಹಾಲಿನ ಕೇಂದ್ರಗಳನ್ನು ಸ್ಥಾಪಿಸ ಬಾರದೇಕೆ ?

ಶ್ರೀ ಎಚ್. ರಾಚಯ್ಯ.—ಪ್ರತಿ ಗ್ರಾಮದಲ್ಲಿಯೂ ಸಹಕಾರ ಸಂಘಗಳನ್ನು ಏರ್ಪಾಡು ಮಾಡಿಕೊಂಡು ಕೇಂದ್ರ ಸರ್ಕಾರದಿಂದ ಬರುವ ಹಸುಗಳನ್ನುಪಯೋಗಮಾಡಿಕೊಂಡರೆ ರಾಜ್ಯ ಸರ್ಕಾರದಿಂದ ಏನಾದರೂ ಸಹಾಯವನ್ನಪೇಕ್ಷೆಮಾಡಿದರೆ, ಸಹಾಯ ಕೊಡಲು ಸಿದ್ಧರಾಗಿದ್ದೇವೆ. ತಮ್ಮಂಥ ಮಾನ್ಯ ಸದಸ್ಯರು ಗ್ರಾಮಗಳಲ್ಲಿ ಸಹಕಾರ ಸಂಘಗಳನ್ನು ವ್ಯವಸ್ಥೆಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಹಾಗಿಲ್ಲದೆ ಎಲ್ಲವನ್ನೂ ಸರ್ಕಾರ ಮಾಡಬೇಕೆಂದರೆ ತಡವಾಗುತದೆ. ಒಟ್ಟಿನಲ್ಲಿ ಈ ಮೂರು ಇಲಾಖೆಗಳಲ್ಲಿಯೂ ಕೆಲಸ ಜೆನ್ನಾಗಿಯೂ ವಿತರಣೆಯಿಂದಲೂ ಮುಂದುವರಿದಿದೆಯಾದುದರಿಂದ ಈ ಬೇಡಿಕೆಯನ್ನು ಮಾನ್ಯ ಸದಸ್ಯರು ಒಪ್ಪಬೇಕೆಂದು ಸಭೆಯ ಮುಂದಿಟ್ಟಿದ್ದೇನೆ. ಮಾನ್ಯಸದಸ್ಯರು ಮಾಡಿರುವ ಟೀಕೆ ಹಾಗೂ ರಚನಾತ್ಮಕ ಸಲಹೆಗಳನ್ನು ಗಮನದಲ್ಲಿಟ್ಟು ಇನ್ನೂ ಹೆಚ್ಚಿನ ಪ್ರಗತಿಯನ್ನು ಬರುವ ವರ್ಷದಲ್ಲಿ ಸಾಧಿಸುತ್ತೇವೆದು ಹೇಳುತ್ತೇನೆ.

Sri S. D. KOTHAVALE Certain concessions are extended in the matter of cultivation of cashewnut in South Kanara and North Kanara districts. Certain cultivators are trying to cultivate cashewnut definitiely in Dharwar district and elsewhere. Will the Government extend the scheme of concessions to these areas ?

ಶ್ರೀ ಎಚ್. ರಾಚಯ್ಯ.—ಗೇರುಬೀಜದ ಫಸಲನ್ನು ಬೆಳೆಯಲು ಇಡಿಯ ಸಂಸ್ಥಾನದಲ್ಲಿ ಎಲ್ಲಕಡೆಯೂ ಅವಕಾಶವಿದೆ. ಇದನ್ನು ಇಡಿಯ ಸಂಸ್ಥಾನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜಾರಿಗೆ ಕೊಡಬೇಕೆಂದು ಯೋಚನೆಯಲ್ಲಿದೆ. ತಾವು ಕೇಳಿರುವ ರಿಯಾಯಿತಿಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ರಾಮಪ್ಪ (ಹರಿಹರ).—ಕೇಂದ್ರಶಾಖೆಯ ಉಪನಿರ್ದೇಶಕರು ದಾವಣಗೆರೆಯಲ್ಲಿ ಒಂದು ಡೈರಿ ಫಾರಮ್ಮನ್ನು ತೆರೆಯುವ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದರು ಆ ಬಗ್ಗೆ ತಾವು ಏನಾದರೂ ಆಲೋಚನೆ ಮಾಡಿದ್ದೀರಾ ?

ಶ್ರೀ ಎಚ್. ರಾಚಯ್ಯ.—ನಾನು ಆಗಲೇ ಹೇಳಿದ ರೀತಿಯಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಜಿಲ್ಲಾ ಹೆಡ್‌ಕ್ವಾರ್ಟರಿನಲ್ಲಿಯೂ ಒಂದು ಕೇಂದ್ರವನ್ನು ತೆರೆಯಬೇಕೆಂದಿದೆ.

ಶ್ರೀ ಎಂ. ರಾಮಪ್ಪ.—ಅದಲ್ಲ, ನಾನು ಹೇಳುವುದು. ದಾವಣಗೆರೆಗೆ ಸ್ಪೆಷಲ್ಲಾಗಿ ಏನಾದರೂ ಮಾಡಬೇಕೆಂದಿದ್ದೀರಾ ?

ಶ್ರೀ ಎಚ್. ರಾಚಯ್ಯ.—ಸ್ಪೆಷಲ್ಲಾಗಿ ಯಾವುದೂ ಸರ್ಕಾರದವರ ಗಮನಕ್ಕೆ ಬಂದಿಲ್ಲ; ಬಂದರೆ ಹೇಳುತ್ತೇನೆ.

Sri C. J. MUCKANNAPPA.—Sir, he did not tell us about the Stud Farm at Kunigal and also about the means adopted for popularising fish in the State.

ಶ್ರೀ ಎಚ್. ರಾಚಯ್ಯ.—ಈಗಾಗಲೇ ಸುಮಾರು 25 ಲಕ್ಷ ಮಿಾನಿನ ಮರಿಗಳನ್ನು ತಂದು ಹಂಚಿದ್ದೇವೆ.

ಒಬ್ಬ ಸದಸ್ಯರು.—ಮಿಾನನ್ನು ತಂದುಕೊಡುವ ವ್ಯವಸ್ಥೆಯನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಎಚ್. ರಾಚಯ್ಯ.—ಅದಕ್ಕೂ ಏರ್ಪಾಡು ಮಾಡಿದೆ. ಇನ್‌ಲ್ಯಾಂಡ್ ಫಿಷರಿ ಡೆವಲಪ್‌ಮೆಂಟ್ ಸ್ಕೀಮ್ ಎಂಬುದಿದೆ. ಕರಾವಳಿ ಜಿಲ್ಲೆಯಲ್ಲೇ ಅಲ್ಲದೆ ಹುಬ್ಬಳ್ಳಿ ಕೆರೆ, ಬೆಂಗಳೂರು ಪಕ್ಕದಲ್ಲಿರುವ ಕೆರೆಗಳು, ತುಂಗಭದ್ರ ಕಟ್ಟೆ, ನುಗುಕಟ್ಟೆ ಇತ್ಯಾದಿ ಕೆರೆಗಳಲ್ಲೂ ಒಳ್ಳೊಳ್ಳೆಯ ಎಂಟು ಹತ್ತು ಪೌಂಡು ತೂಕಬರುವ ಮಿಾನಿನ ಮರಿಗಳನ್ನು ಲಕ್ಷಗಟ್ಟಲೆ ಸಾರ್ವಜನಿಕರಿಗೆ ಒದಗಿಸಿದ್ದೇವೆ. ಈ ಬಗ್ಗೆ ಇನ್ನೂ ಹೆಚ್ಚಿನ ಕೆಲಸ ನಡೆಸಬೇಕೆಂದು ಮಾಡಿದ್ದೇವೆ.

ಅಮೇಲೆ ಕುಣಿಗಲ್ ಸ್ಟಡ್ ಫಾರಮ್ಮಿನ ವಿಷಯ. ಇದರ ಬಗ್ಗೆ ಸರ್ಕಾರದವರು ಯಾವ ತೀರ್ಮಾನವನ್ನೂ ಕೈಕೊಂಡಿಲ್ಲ. ಇದನ್ನು ಎಲ್ಲಿ ಬೇರೆಯವರಿಗೆ ಕೊಟ್ಟುಬಿಡುತ್ತಾರೋ ಎಂಬ ಭ್ರಾಂತಿಯಿಂದ ಜನರು ಹೀಗೆ ಕೇಳುತ್ತಿದ್ದಾರೆ. ಈ ಬಗ್ಗೆ ಈಗ ಒಂದು ಸ್ಕೀಮನ್ನು ತರಿಸಿಕೊಂಡು ಅದನ್ನು ಸರ್ಕಾರದವರೇ ಏಕೆ ನಡೆಸ ಕೂಡದೆಂದು ಯೋಚನೆ ಮಾಡುತ್ತಿದ್ದಾರೆ. ಇದಕ್ಕೆ ಸರಿಯಾಗಿ ಕೇಂದ್ರಸರ್ಕಾರದವರೂ ಒಂದು ಸ್ಟಡ್ ಫಾರಮ್ ಬೇಕೆಂದು ಕೇಳುತ್ತಿದ್ದಾರೆ. ಇನ್ನೂ ಯಾವ ತೀರ್ಮಾನವನ್ನೂ ಕೈಕೊಂಡಿಲ್ಲ, ಎಲ್ಲ ವಿಷಯಗಳನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡುತ್ತಾರೆಂದು ಹೇಳುತ್ತೇನೆ

[Sri N. O. Samaji put a question in Hindi.]

(ಅಮೋನಿಯಂ ಸಲ್ಫೇಟನ್ನು ಹಂಚುವುದರಲ್ಲಿ ಭೂಮಿಯ ಗುಣವನ್ನು ನೋಡಿ ಅದಕ್ಕನುಗುಣವಾಗಿ ಹಂಚುತ್ತಿದ್ದೀರಾ ; ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಬೇಕೆಂದು ನೋಡಿಕೊಂಡು ಕೊಡುತ್ತಿದ್ದೀರಾ ?)

ಶ್ರೀ ಎಚ್. ರಾಚಯ್ಯ.—ಪ್ರತಿಯೊಂದು ಜಿಲ್ಲೆಯಲ್ಲೂ ಯಾವ ಯಾವ ಪ್ರಮಾಣದಲ್ಲಿ ಗೊಬ್ಬರ

ಬೇಕೆಂದು ನಂಬಂಧಪಟ್ಟ ಅಧಿಕಾರಿಗಳನ್ನು ಕೇಳಿ, ಅದರ ಪ್ರಕಾರ ಎಲ್ಲಾ ಜಿಲ್ಲೆಗಳಿಗೂ ಹಂಚುತ್ತಿದ್ದೇವೆ. ಅವಶ್ಯಕತೆಯನ್ನೂ ಪರಿಗಣಿಸುತ್ತೇವೆ. ನಿಮ್ಮ ಜಿಲ್ಲೆಯಲ್ಲಿ ಕೊರತೆಯಿದೆಯೆಂದು ಮಾನ್ಯ ಸದಸ್ಯರಾದ ಪಾಟೀಲರು ನಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ಸಾಕಾದಷ್ಟು ಪ್ರಮಾಣದಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಕೇಂದ್ರ ಸರ್ಕಾರದಿಂದ ಎಷ್ಟು ಬರುತ್ತದೆಯೋ ನೋಡಿಕೊಂಡು ಜಿಲ್ಲೆಗಳ ಅವಶ್ಯಕತೆಯ ಮೇಲೆ ಹಂಚುತ್ತೇವೆಂಬ ಭರವಸೆಯನ್ನು ಮಾತ್ರ ನಾನು ಕೊಡಬಲ್ಲೆ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಕಾಕ್‌ಸರ ಗೋಡಿನಲ್ಲಿ ತೆಂಗಿನ ಸಂಶೋಧನಾ ಕೇಂದ್ರವೊಂದಿತ್ತು. ಈಗ ಅದು ಕೇರಳಕ್ಕೆ ಹೋಗಿ ನಮ್ಮ ಕಡೆಗೆ ಇದರ ಅನುಕೂಲತೆ ದೊರೆಯದಂತಾಗಿದೆ. ಈ ದೃಷ್ಟಿಯಿಂದ ಬರುವ ವರ್ಷದಲ್ಲಿಯಾದರೂ ನಮ್ಮ ಕಡೆಗೆ ಒಂದು ತೆಂಗಿನ ಪರಿಶೋಧನಾ ಕೇಂದ್ರವನ್ನು ತೆರೆಯುತ್ತೀರಾ ?

ಶ್ರೀ ಎಚ್. ರಾಚಯ್ಯ.—ತೆಂಗಿನ ನಸಿಗಳು 500 ಕೊಡುತ್ತಿದ್ದ ಕಡೆ ಈಸಾರಿ ದಕ್ಷಿಣ ಕನ್ನಡ ಜಿಲ್ಲೆಗೆ 2147 ಹಂಚಿದ್ದೇವೆ. ಕಾಸರಗೋಡಿಂದ ಹೆಚ್ಚಿಗೆ ಪ್ರಮಾಣದಲ್ಲಿ ಸಿಕ್ಕದಿರುವ ಕಾರಣ ಈಸಾರಿ 90 ಸಾವಿರ ನಸಿಗಳನ್ನು ಏಳಿಸಿ ಹಂಚಬೇಕೆಂದು ಮಾಡಿದ್ದೇವೆ. ರಿಸರ್ಚ್‌ಸ್ಟೇಷನ್ ಸ್ಥಾಪನೆ ಮಾಡುವ ವಿಷಯ ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ. ಎಫ್. ಪಾಟೀಲ್.—ಅರಣ್ಯ ಇಲಾಖೆಯ ನಂಬಂಧದಲ್ಲಿ ಅನೇಕ ಮಾನ್ಯ ಸದಸ್ಯರು ಖೋತಾ ನೂಚನೆಗಳನ್ನು ಕಳುಹಿಸಿದ್ದಾರೆ. ಮತ್ತು ಮಾತನಾಡಿದ ಅನೇಕ ಸದಸ್ಯರು ಕೆಲವು ಟೀಕೆಗಳನ್ನು ಸಹ ಮಾಡಿದ್ದಾರೆ; ಕಟ್ ಮೋಷನ್‌ಗಳಲ್ಲೂ ಕೆಲವು ಅಂಶಗಳನ್ನು ಎತ್ತಿದ್ದಾರೆ. ಬಹುಶಃ ಸರಿಯಾಗಿ ವಿಷಯಗಳ ಅರಿವಿಲ್ಲದೆ ಈ ಕೆಲವು ನೂಚನೆಗಳು ಬಂದಂತಿವೆ. ಇವುಗಳ ಬಗ್ಗೆ ಮುಂಚೆ ನಾಲ್ಕು ಮಾತುಗಳನ್ನು ಹೇಳಿ, ಆಮೇಲೆ ಭಾಷಣಗಳಿಗೆ ಉತ್ತರ ಹೇಳಬಯಸುತ್ತೇನೆ.

ಶ್ರೀ ಶ್ರೀನಿವಾಸ ಶೆಟ್ಟರು, ಇಲಾಖೆಯ ರೀ ಆರ್ಗನೈಜೇಷನ್ ವಿಷಯ ಪ್ರಸ್ತಾಪಿಸಿದರು. ಈ ನಂಬಂಧದಲ್ಲಿ ಹೇಳುವುದಾದರೆ, 1958 ರವರೆಗೂ ಇಡೀ ಪ್ಲೇಟಿಗೆ ನಂಬಂಧ ಪಟ್ಟಂತೆ ಒಂದು ವರ್ಕಿಂಗ್ ಪ್ಲಾನು ಕೂಡ ಇರಲಿಲ್ಲ. ನಾಲ್ಕು ಡಿವಿಜನ್‌ಗಳೆಂದು ಒಂದುವಿಂಗದನೆ ಮಾಡಿದ್ದಲ್ಲದೆ. ಪ್ರತಿಯೊಂದು ಡಿವಿಜನ್ನಿನ ಜೆರಿಟೋರಿಯಲ್ ಭಾಗಗಳನ್ನೂ ಜಾಸ್ತಿ ಮಾಡಲಾಯಿತು. ಈ ವರ್ಷ ಸೌತ್ ಕೆನರಾದಲ್ಲಿ ಎರಡು ಇದ್ದುದನ್ನು ನಾಲ್ಕು ಮಾಡಿದ್ದೇವೆ; ಶೆಂಕರ ನಾರಾಯಣ ಮತ್ತು ಸುಳ್ಯ ಎಂದು ಎರಡು ರೇಂಜುಗಳನ್ನೂ ಅಲ್ಲ ಮಾಡಿದ್ದೇವೆ; ಇವೆಲ್ಲವೂ ಈಗ ಒಂದೆರಡು ವರ್ಷಗಳಿಂದ ದೇಶದ ಅರಣ್ಯ ಸಂಪತ್ತನ್ನು ರೂಢಿಸುವ ದೃಷ್ಟಿಯಿಂದ ಮಾಡಿದಂಥ ಆಡಳಿತ ಬದಲಾವಣೆಗಳಾಗಿವೆಯೆಂದು ನಾನು ಹೇಳಬಯಸುತ್ತೇನೆ.

ಅರಣ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ವಿಷಯದ ಬಗ್ಗೆ ಸಂಕ್ಷೇಪವಾಗಿ ನಮುಜಾಯಿಷಿ ಹೇಳುವುದಾದರೆ, 1956-57ರಲ್ಲಿ 2 ಕೋಟಿ 76 ಲಕ್ಷ ಚಿಲ್ಲರೆ ಆದಾಯ ಬಂದಿರುವಲ್ಲಿ 1957-58ರಲ್ಲಿ ನುಮಾರು 70 ಲಕ್ಷ ಹೆಚ್ಚಿಗೆ ಆದಾಯ ಬಂದಿದೆ. 1958-59ರಲ್ಲಿ 1ಕೋಟಿ 67 ಲಕ್ಷ ಚಿಲ್ಲರೆಯಷ್ಟು ಬೆಲೆ ಬಾಳುವಷ್ಟು ಸಾಮಾನುಗಳನ್ನು ಅರಣ್ಯದಿಂದ ತೆಗೆದು ಜನರಿಗೆ ಉಪಯೋಗ ಮಾಡಿದ್ದೇವೆ. 1959-60ರ ಅಂಕಿಗಳು ಗೊತ್ತಿಲ್ಲದಿದ್ದರೂ, ಎಂದಿಗಿಂತ ಹೆಚ್ಚಿಗೆ ಆದಾಯ ಬರುತ್ತದೆಂಬ ಭರವಸೆ ನನಗಿದೆ ಬಾಂಬೂ 59-60ರಲ್ಲಿ 15,000ಟನ್ ಎಕ್ಸ್‌ಪ್ಲಾಯಿಟ್ ಮಾಡಿದ್ದೇವೆ. ಸ್ಲೀಪರ್ಸ್ 57-58ರಲ್ಲಿ 3½ ಲಕ್ಷ ತೆಗೆಯುತ್ತಾ ಇದ್ದೆವು. ಈಗ 7½ ಲಕ್ಷದ ವರೆಗೂ ಕೊಡುತ್ತಾ ಇದ್ದೇವೆ. 12 ಸಾವಿರದವರೆಗೂ ಮಾರಾಟ ಮಾಡುತ್ತಾ ಇದ್ದೆವು. ಅದನ್ನು ಈಗ 40 ಸಾವಿರದ ವರೆಗೂ ಹೆಚ್ಚಿಸಿದ್ದೇವೆ. ಅಲ್ಲದೆ ವೇಸ್ಟೇಜ್ ಬಹಳವಾಗ ತಾ ಇದೆ. ದೊಡ್ಡ ದೊಡ್ಡ ಮರಗಳನ್ನು ಕಡಿದು ತುಂಡುಗಳನ್ನು ಅಲ್ಲಿಯೇ ಬಿಟ್ಟು ಬಿಟ್ಟಿರುತ್ತಾರೆ ಎಂದು ಆರೋಪ ಬಂದಿದೆ. ಆದ್ಯಷ್ಟಿಯಿಂದ ಹೇಳುವುದಾದರೆ For the better utilisation of forest wealth and the prevention of wastage sanction has been given for 4 moblie salvaging saw mills. and two mobile timber treatment plants also. ಟ್ರೀಟ್‌ಮೆಂಟ್ ಮಾಡಿ ಕೊಡುವುದರಿಂದ ಹೆಚ್ಚಿನ ತಾಳಿಕೆ ಬರುತ್ತಾ ಇವೆ. ಭದ್ರಾವತಿಯಲ್ಲಿ ಟಿಂಬರ್‌ನ್ನು ಟ್ರೀಟ್ ಮಾಡುವುದಕ್ಕೆ 3 ಷಿಫ್ಟ್‌ನಲ್ಲಿ ಕೆಲಸ ಮಾಡುತ್ತಾ ಇದ್ದೇವೆ. ಶಿವಮೊಗ್ಗದಲ್ಲೂ ಕೂಡ ಇಂಟಿಗ್ರೇಟೆಡ್ ವುಡ್ ಇಂಡಸ್ಟ್ರೀಸ್ ಎಂದು ಹೇಳಿ ಮಾಡಿ ಬೇರೆ ಬೇರೆ ವುಡ್‌ಗಳನ್ನೆಲ್ಲಾ ಹಾಕಿ ಟ್ರೀಟ್ ಮಾಡಿ ಕೊಡುವುದು ಮತ್ತು ಜನರಿಗೆ ಬೇಕಾದ ಉಪಕರಣಗಳನ್ನು ತಯಾರು ಮಾಡುವುದು, ಫರ್ನೀಚರ್, ಡೋರ್ಸ್, ವಿಂಡೋಸ್ ಮಾಡುವುದು ಇದನ್ನೆಲ್ಲಾ ಬೆಳೆಸುತ್ತಾ ಇದ್ದೇವೆ. ಇದಕ್ಕೆ ಮೆಷಿನರಿ ಕೂಡ ಆರ್ಡರ್ ಮಾಡಿದ್ದೇವೆ.

1-30 P.M.

ಅಫಾರಸ್ಟೇಷನ್ ಸಾಕಾದಷ್ಟು ಪ್ರಮಾಣದಲ್ಲಿ ನಡೆದಿಲ್ಲ ಎಂದು ಹೇಳಿದರು. ಅಂಕಿಗಳನ್ನು ಮಾತ್ರಕೊಡುತ್ತೇನೆ. 56-57ರಲ್ಲಿ 15,000 ಎಕರೆಗಳಲ್ಲಿ ಗಿಡಗಳನ್ನು ಹಚ್ಚಿದ್ದೇವೆ. 58-59ರಲ್ಲಿ 20 ಸಾವಿರ, ಈ ಸಲ 29,807, ಒಟ್ಟು 2ನೇ ಪಂಚವಾರ್ಷಿಕ ಯೋಜನೆಯಲ್ಲಿ 81,000 ಎಕರೆಗಳಷ್ಟು ಅಫಾರೆಸ್ಟೇಷನ್ ಮಾಡಬೇಕೆಂದು ಇದೆ. ಅದರಲ್ಲಿ ಈಗಾಗಲೇ 78,000 ಕ್ಕೂಮೇಲ್ಪಟ್ಟು ಮಾಡಿದ್ದೇವೆ. ಈ ವರ್ಷದ ಕೊನೆಯಲ್ಲಿ ಟಾರ್ಜೆಟ್‌ಗಿಂತ 15-20,000 ಕ್ಕೂ ಹೆಚ್ಚಾಗಿ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ ಸಾಮಾನ್ಯವಾಗಿ ನಮ್ಮ ಲೆಕ್ಕದ ಪ್ರಕಾರ 100ಕ್ಕೆ 70, 80 ರಷ್ಟು ಗಿಡಗಳು ಬದುಕಿದರೆ ಸಾಕಾದಷ್ಟು ಆಯಿತು, ಮಾಡಿದ್ದು ಸಫಲವಾಯಿತು ಎಂದು ಭಾವಿಸಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಕೂಡ ಉತ್ತಮ ಪ್ಲಾಂಟೇಷನ್ ಬಂದಿದೆ. ಕೆಲ ಕೆಲವುಕಡೆ ಹೆಚ್ಚಾಗಿ ಬರುತ್ತವೆ. ಕೆಲವು ಸಾಯುತ್ತವೆ. ಒಟ್ಟಾರೆ 50-60 ಕ್ಕಿಂತ ಹೆಚ್ಚಾಗಿ ಬದುಕಿವೆ ಎಂದು ಲೆಕ್ಕ ತೆಗೆಯುವುದು ಬಹಳ ಕಷ್ಟವಾಗಿರುವುದರಿಂದ ಸಾಮಾನ್ಯವಾಗಿ ಹೇಳಬಹುದು. ಅದರಲ್ಲಿ ಟೀಕ್ ಪ್ಲಾಂಟೇಷನ್ 4,212 ಇದ್ದದ್ದು 7,662ರವರೆಗೂ ಹೆಚ್ಚಾಗಿದೆ. ಕ್ಯಾಷ್ಯೂನಟ್ ಪ್ಲಾಂಟೇಷನ್ 57ಕ್ಕೆ ಹಿಂದೆ 106 ಎಕರೆಯಷ್ಟು ಇದ್ದದ್ದು ಈಗ 3,000 ಎಕರೆಯಷ್ಟು ಹೆಚ್ಚಿದೆ. ಶ್ರೀಮಾನ್ ನಾರಾಯಣ ಸ್ವಾಮಿ ಅವರು ಹಾಣಸೆ ಮರಗಳನ್ನು ಹಾಕುವುದಿಲ್ಲ ಎಂದು ಹೇಳಿದರು. ಅವರ ಸಂಗಡ ಚರ್ಚೆ ಮಾಡಿದಾಗ ಅಥವಾ ಪ್ರವಾಸ ಮಾಡಿದಾಗ ಹೇಳಿದ್ದೆ.

(ಶ್ರೀ ಕೆ. ಎಫ್. ಪಾಟೀಲ್)

ಹುಣಸೇಮರ ಕಡಿಯುವುದನ್ನು ತಡೆಯುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ಆ ಬಗ್ಗೆ ಒಂದು ಆರ್ಡರ್ ಕೂಡ ಇಷ್ಯೂಮಾಡಿದ್ದೇವೆ. ಹುಣಸೇಮರ ಕಡಿದು ಇದ್ದಲು ಮಾಡಲಿಕ್ಕೆ ಕೊಡಿರಿ ಎಂದು ಕೇಳುತ್ತಿದ್ದರು ಅದನ್ನು ಈಗ ನಿಲ್ಲಿಸಿದ್ದೇವೆ. 100ಕ್ಕೆ 50 ರಷ್ಟಾದರೂ ಮೈದಾನ ಪ್ರದೇಶದಲ್ಲಿ ಹುಣಸೆ ಗಿಡ ಹಾಕಬೇಕೆಂದು 59ರಲ್ಲಿ ಆಜ್ಞೆ ಹೊರಡಿಸಿದ್ದೇವೆ. ಮತ್ತು ಪ್ಲಾಂಟೇಷನ್ ಕೂಡ ಹಾಕಿದ್ದೇವೆ. ಅದು ಬೆಳೆದು ಮಾನ್ಯ ಸದಸ್ಯರ ಲಕ್ಷ್ಯಕ್ಕೆ ಬರಬೇಕಾದರೆ ಇನ್ನು ಸ್ವಲ್ಪ ದಿವಸ ಬೇಕು. ಅಂತೂ ಇಷ್ಟು ಪ್ರಯತ್ನ ಮಾಡಿದ್ದೇವೆ ಎಂದು ಹೇಳಬಯಸುತ್ತೇನೆ.

ಪ್ಯೂಯಲ್ ಪ್ಲಾಂಟೇಷನ್ ವಿಷಯವನ್ನು ತೆಗೆದುಕೊಂಡರೆ ಬೆಂಗಳೂರು ನಗರದ ದೃಷ್ಟಿಯಿಂದ 2,04,000ಟನ್ ನಷ್ಟು ಫ್ಯೂಯಲ್ ಈ ಊರಿಗೆ ದೊರಕಿಸಬೇಕಾಗುತ್ತದೆ. 15-20ವರ್ಷ ಹೀಗೆಯೇ ಬಿಟ್ಟಿದ್ದಾದರೆ ಬಹಳ ಕಷ್ಟ ಪರಿಸ್ಥಿತಿ ಬರುತ್ತದೆ. ನುತ್ತಮುತ್ತ 50-60 ಮೈಲಿಯಲ್ಲಿ ಎಷ್ಟು ಭೂಮಿ ಫಾರೆಸ್ಟ್ ಇದೆ ಅದನ್ನೆಲ್ಲಾ ಆಫಾರೆಸ್ಟೇಷನ್ ಮಾಡುವುದಕ್ಕೂ ಕೂಡ ಚೀಫ್‌ಕನ್‌ಸರ್ವೇಟರ್ ಅವರು ಪ್ರಯತ್ನ ಮಾಡಿದ್ದಾರೆ. ಈ ಒಂದು ಕಾರ್ಯಕ್ರಮ ಹಾಕಿಕೊಂಡು ಕೆಲಸಮಾಡಿದರೆ 10 ವರ್ಷಗಳಲ್ಲಿ ಇದರ ಕೊರತೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಅನಿಸುತ್ತದೆ.

ರಿಸರ್ಚ್ ಸಂಬಂಧದಲ್ಲೂಕೂಡ ಏನೇನೂ ಮಾಡಿಲ್ಲ ಎನ್ನುವ ವಿಷಯವನ್ನು ತಿಳಿಸಿದ್ದಾರೆ. ನಮ್ಮಲ್ಲಿದ್ದಂಥ ಒಂದುರಿಸರ್ಚ್ ಸ್ಪೇಷಿನನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡ ಮೇಲೆ ನಾವು ಹೊಸದಾಗಿ ಅದನ್ನು ಆರ್ಗನೈಸ್ ಮಾಡಬೇಕಾಗಿ ಬಂದಿರುವುದರಿಂದ ನಮ್ಮ ಯೂಟಿಲೈಸೇಷನ್ ಆಫೀಸರು ಪ್ರಯೋಗಗಳನ್ನು ನಡೆಸುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ artificial regeneration technique, natural regeneration of teak, etc., data regarding manurial test; ಇವನ್ನೆಲ್ಲಾ ಎಕ್ಸಪರಿಮೆಂಟ್ ಮಾಡುವುದಲ್ಲದೆ ಈಗ ಉದ್ಯೋಗಗಳು ಬಹಳವಾಗಿ ಬೆಳೆಯುತ್ತಾ ಇವೆ. ಹೇಪರ್ ಫ್ಯಾಕ್ಟರಿ ರೇಯೊನ್ ಪಲ್ಪ್‌ಫ್ಯಾಕ್ಟರಿ ವಿಶೇಷವಾಗಿ ಬರುತ್ತಾ ಇರುವುದರಿಂದ ಆ ಫ್ಯಾಕ್ಟರಿಗಳಿಗೆಲ್ಲಾ ಕಚ್ಚಾ ಸಾಮಾನನ್ನು ಒದಗಿಸಬೇಕಾದರೆ ಏನು ಮಾಡಬೇಕೆಂಬ ದೃಷ್ಟಿಯಿಂದ ಯೋಚನೆ ಮಾಡುತ್ತಾ ಇದ್ದಾರೆ. ನಮ್ಮಲ್ಲಿರತಕ್ಕ ಬಾಂಬೂ ಈಗ ಬಹಳ ಮಟ್ಟಿಗೆ ಫ್ಲವರಿಂಗ್ ಆಗಿರುವುದರಿಂದ 8-10ವರ್ಷ ಬಹಳ ಕಷ್ಟ ಎದೆ. ತೀವ್ರವಾಗಿ ಬೆಳೆಯ ಬೇಕು ಮತ್ತು ಕಚ್ಚಾಸಾಮಾನು ಫ್ಯಾಕ್ಟರಿಗಳಿಗೆಲ್ಲಾ ಒದಗಿಸ ಬೇಕೆಂಬದೃಷ್ಟಿಯಿಂದ ಈ ವರ್ಷವೇ ಜೆಸ್ಟ್ ಮಾಡಿದಂತಹ ಒಳ್ಳೆಯ ಸ್ಪೀಸೀಸನ್ನು ಪ್ಲಾಂಟ್ ಮಾಡಿ ಆ ಇಂಡಸ್ಟ್ರೀಸ್ suffer ಆಗದಹಾಗೆ ನೋಡಿಕೊಳ್ಳುತ್ತಾ ಇದ್ದಾರೆ ಅಸ್ಸಾಮಿನಿಂದಕೂಡ ಕೆಲವು ಟಿಂಬರ್ ಸ್ಪೀಸೀಸನ್ನು ಸ್ಪೆಷಲ್ ಆಗಿ ತರಿಸಿಕೊಂಡು ಅಗತ್ಯವಿದ್ದರೆ ನಮ್ಮ ಚೀಫ್‌ಕನ್‌ಸರ್‌ವೇಟರ್ ಅವರು 15-20 ದಿವಸ ಅಲ್ಲಿಗೆ ಹೋಗಿ ವಿಷಯ ಸಂಗ್ರಹಣೆ ಮಾಡಿಕೊಂಡು ಬರುವ ವಿಚಾರವನ್ನಿಟ್ಟುಕೊಂಡಿದ್ದಾರೆ ಎಂದು ಹೇಳಬಯಸುತ್ತೇನೆ.

ಶ್ರೀಮಾನ್ ಶ್ರೀನಿವಾಸಶೆಟ್ಟರು ಒಂದು ವಿಚಾರವನ್ನು ವ್ಯಕ್ತಮಾಡಿದರು. ಕೆನರಾ ಜಿಲ್ಲೆಯಲ್ಲಿ ರೆವಿನ್ಯೂ ಏರಿಯಾದಲ್ಲಿದ್ದಂಥದ್ದನ್ನೆಲ್ಲಾ ಫಾರೆಸ್ಟಿಗೆ ಸೇರಿಸಿಕೊಂಡಿದ್ದಾರೆ ಅದರಿಂದಾಗಿ ಜನಗಳ ಹಕ್ಕುಬಾಧ್ಯತೆಗೆ ತೊಂದರೆ ಬರಬಹುದು, ಅವರ ಹಕ್ಕುಬಾಧ್ಯತೆ ಹೋಗಬಹುದು ಎಂದು, ಈಗ 1090 ಸ್ಕ್ವೇರ್ ಮೈಲ್ ಏರಿಯಾದಷ್ಟು ದಕ್ಷಿಣಕನ್ನಡ ಜಿಲ್ಲೆಯಲ್ಲಿ unreserved reveune waste land ಇದೆ. ಯಾವುದು ಫಾರೆಸ್ಟ್‌ಗೆ ಅನುಕೂಲವಾಗಿದೆಯೋ ಅದನ್ನು ಮಾತ್ರ ತೆಗೆದುಕೊಳ್ಳುತ್ತೇವೆ. Land utility survey ಪೂರ್ತಿ ಇಪ್ಪೊತ್ತು ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಜನರಲ್ ಆಗಿ Land utility survey ಯನ್ನು ಕಲ್ಪನೆಯಲ್ಲಿಟ್ಟುಕೊಂಡು ಯಾವುದು ಗೋಮಾಳ, ಯಾವುದು ವ್ಯವಸಾಯಕ್ಕೆ ಅನುಕೂಲವಾಪದ್ದು, ಯಾವುದು ಪಿ. ಡಬ್ಲ್ಯು. ಡಿ. ಗೆ ಸೇರಿದ್ದು ಎಂಬುದನ್ನು ಪರಿಶೀಲನೆಮಾಡಿ ಯಾವುದನ್ನು ಸೇರಿಸಿಕೊಳ್ಳಬೇಕೋ ಅದನ್ನು ಸೇರಿಸಿಕೊಳ್ಳಲು ತಕ್ಕ ನಿಬಂಧನೆಗಳನ್ನು ವಾಡಿದ್ದಾರೆ ಎಂಬ ಮಾತನ್ನುಹೇಳುತ್ತೇನೆ. ಭೂಮಿ ಹಂಚುವಾಗ ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತಿದ್ದೇವೆ. ಮೇಲಿಗೆ ತೊಂದರೆ ಮಾಡುತ್ತಿಲ್ಲ.

ಈಗ ಐದು ಪ್ರದೇಶಗಳಲ್ಲಿ ಬೇರೆ ಬೇರೆ ಕಾನೂನುಗಳಿರುವುದಕ್ಕೆ ಬದಲಾಗಿ ಒಂದೇ ರೀತಿಯಾದ ಕಾನೂನನ್ನು ಜಾರಿಗೆ ತರಬೇಕೆಂಬ ದೃಷ್ಟಿಯಿಂದ ಈಗಾಗಲೆ the Mysore Wild Animals Preservation Bill has been drawn up. It is sent to the Centre for concurrence. ಅಲ್ಲದೆ ಮೈಸೂರು ಫಾರೆಸ್ಟ್ ಬಿಲ್ ಒಂದನ್ನು ಕೂಡ ಮುಂದಿನ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ಪಡೆಯಬೇಕೆಂಬ ಇಚ್ಛೆಯಿದೆ. ಚೆಕ್ನಿಕಲ್ ಡಿಫಿಕಲ್ಟೀಸ್ ಇದ್ದುದನ್ನು ನಿರಿಪಡಿಸಲಾಗಿದೆ.

ಶಿಕ್ಷಣದ ನಲುವಾಗಿ ಡೆಹರಾಡೂನ್ ಮತ್ತು ಕೊಯಮತ್ತೂರಿಗೆ ಹಿಂದೆ ಎಷ್ಟು ಜನರನ್ನು ಕಳುಹಿಸಲು ಅವಕಾಶವಿತ್ತೋ ಅದನ್ನು ಈಗ ಹೆಚ್ಚಿಸಿದೆ. ರೇಂಜುಗಳು ಮತ್ತು ಗಾರ್ಡುಗಳಿಗೆ ಶಿಕ್ಷಣ ಕೊಡುವ ಉದ್ದೇಶದಿಂದ ತರಗತಿಗಳನ್ನು ತೆಗೆಯುತ್ತಿದ್ದೇವೆ.

Sri G. N. PUTTANNA.—What are the facilities you have given to the Forest Departmental officers for the detection of smuggling, Sir? You have not given them even one jeep. ಫಾರೆಸ್ಟಿನಲ್ಲಿ ಸ್ಮಗ್ಲಿಂಗ್ ಜಾಸ್ತಿಯಾಗಿದೆ. ಡಿ. ಎಫ್. ಓ. ಅಥವಾ ಕ್ಷನರ್ವೇಟರು ಕಾರುಗಳಲ್ಲಿ ಅರಣ್ಯಕ್ಕೆ ಹೋಗಲು ಸಾಧ್ಯವಿಲ್ಲ. ಅವರಿಗೆ ಸರಿಯಾದ ಸಹಾಯ ಕೊಡುತ್ತಿಲ್ಲ. I have written letters twice or thrice to the Hon'ble Minister to supply one or two jeeps for each district. Sandal smuggling and wood smuggling are going on. Why don't you encourage proper detection? Unless these forest officers are given some conveniences and facilities, how can they check smuggling?

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ್ದನ್ನ ಒಪ್ಪುತ್ತೇನೆ. ಆದರೆ ಎಲ್ಲಾ ಕಡೆಗೂ ಜೀಪನ್ನು ಒದಗಿಸಲು ಅವಕಾಶವಿಲ್ಲ. ಬೇರೆ ಬೇರೆ ರೀತಿಯಿಂದ ದೊರಕಿಸಲಾಗುತ್ತಿದೆ. ಈಗ ರೈಫ್ಲ್ ಸ್ಲಿಪರ್ಸ್ ಸರಬರಾಯಿ ಮಾಡುತ್ತಿರುವುದರಿಂದ ಕೇಂದ್ರ ಸರ್ಕಾರದ ಸಹಾಯದಿಂದ ಈ ಸಲ ನಾಲ್ಕು

ಜೀಪುಗಳು ಸಿಕ್ಕಿವೆ. ಈ ವರ್ಷ ಐದು ಜೀಪುಗಳನ್ನು ಬೇರೆ ಬೇರೆ ಕೆಲಸಗಳಿಗಾಗಿ ಕೊಟ್ಟಿದೆ. ಸಾಧ್ಯವಿರುವಷ್ಟು ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎನ್. ಬೊಮ್ಮೇಗೌಡ.—ಪ್ರತಿ ಜಿಲ್ಲೆಯಲ್ಲೂ ಒಂದೊಂದು ಸರ್ಕಾರಿ ಟಿಂಬರ್ ಡಿಪೋ ಇಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ತಮ್ಮ ಭಾಷಣದಲ್ಲಿ ಗಾಡಿ ಚಕ್ರ ಮಾಡುವುದಕ್ಕೆ, ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಮಾಡುವುದಕ್ಕೆ ಮರ ಕೊಡಬೇಕೆಂದು ಹೇಳಿದಿರಿ, ದೊಡ್ಡ ದೊಡ್ಡ ಟಿಂಬರ್ ಎಲ್ಲಾ ಕಂಟ್ರಾಕ್ಟರುಗಳು ತೆಗೆದುಕೊಂಡು ಉಳಿದುದನ್ನು ಗಾಡಿ ಸಾಮಾನು ವಗೈರಗಾಗಿ ಕೊಡಬಹುದೆಂದು ಹೇಳಿದಿರಿ. ಆದರೆ ಅದು ಯೋಗ್ಯವಾಗುವುದಿಲ್ಲವೆಂಬುದು ನನ್ನ ಭಾವನೆ. ಗಾಡಿ ಚಕ್ರಕ್ಕೆ ಕೊಡುವ ಮರಕ್ಕೆ ಬಹಳ ಬೆಲೆಯಿದೆ, ಅದಕ್ಕೆ ಗಟ್ಟಿ ಮರ ಬೇಕು. ಮೈಸೂರು ಡಿವಿಜನ್, ಶಿವಮೊಗ್ಗ ಡಿವಿಜನ್‌ಗಳಲ್ಲಿ ಸಾಮಿಲ್ಸ್ ಇನ್‌ಸ್ಟಾಲ್ ಮಾಡಿವೆ. ಮಲೆನಾಡಿನಲ್ಲಿ, ಟಿಂಬರ್ ಸಿಕ್ಕುವ ಕಡೆ ಡಿಪೋ ಇಟ್ಟು ಮಾರಾಟ ಮಾಡುವುದು ಒಳ್ಳೆಯದು. ಎಲ್ಲಾ ಜಿಲ್ಲೆಗಳಲ್ಲೂ ಡಿಪೋ ತೆಗೆಯಲು ಕಷ್ಟವಾಗಬಹುದು. ಏಕೆಂದರೆ ದೂರಕ್ಕೆ, ಗುಲ್ಬರ್ಗ ಅಥವಾ ರಾಯಚೂರಿಗೆ ತೆಗೆದುಕೊಂಡು ಹೋಗಿ ಮಾರಬೇಕೆಂದರೆ ತೆಗೆದುಕೊಂಡು ಹೋಗುವ ಖರ್ಚು ಹೆಚ್ಚುವುದಲ್ಲದೆ ಎರಡು ಕಡೆ ಸಿಬ್ಬಂದಿ ಇಡಬೇಕಾಗುವುದು. ಇದರಿಂದ ಬೆಲೆ ಹೆಚ್ಚಿ ತೊಂದರೆಯಾಗುತ್ತದೆ. ಕೋ-ಆಪರೇಟಿವ್ ಸೊಸೈಟಿಯವರು ಯಾವ ಜಿಲ್ಲೆಯಲ್ಲಿ ಕೇಳಿದರೂ ರಿಯಾಯಿತಿ ದರದಲ್ಲಿ ಕೊಡಬಹುದು. ತುಮಕೂರಿನಲ್ಲಿ ಫರ್ನಿಚರ್ ತಯಾರಿಸುವ ಉದ್ಯಮವೇನಿದೆ ಅದನ್ನು ತೆಗೆಯುವ ಪರಿಸ್ಥಿತಿ ಒಂದು ಕಾಲಕ್ಕೆ ಇತ್ತು. ಈಗ ಸುಧಾರಣೆ ಮಾಡಿ ಹೆಚ್ಚು ಟಿಂಬರ್ ಒದಗಿಸಿ ಅದನ್ನು ಬೆಳೆಸಲು ಪ್ರಯತ್ನ ಮಾಡುತ್ತಿದ್ದೇವೆ.

ಸಿಬ್ಬಂದಿ ಸಾಕಷ್ಟಿದ್ದರೆ ಕಳುವಾಗುವುದನ್ನು ತಡೆದು ಪೂರ್ಣವಾಗಿ ಉಪಯೋಗ ಮಾಡುವುದರಿಂದ ರೆವೆನ್ಯೂ ಹೆಚ್ಚುತ್ತದೆಂದು ಕಂಡುಬಂದಿದೆ. ಎಲ್ಲೆಲ್ಲೆ ಮರ ಹೋಗುತ್ತಿದೆ ಅಂಥ ಕಡೆ ಮೆಚ್ಯೂರ್ ಆಗಿರುವ ಮರವನ್ನು ತೆಗೆದು ಸ್ಲೀಪರ್ಸ್‌ಗಾಗಿ ನರಬರಾಯಿ ಮಾಡುತ್ತಿದೆ. ಈಗ ರೆವೆನ್ಯೂ ಹೆಚ್ಚಿಸಲು ಈ ಕ್ರಮಗಳನ್ನು ಕೈಕೊಂಡಿದೆ :—

Extending exploitation to remote areas ; finding better use for the hitherto useless woods, reduction of leakage of forest products ; rapid industrialisation of wood-based industries.

Sri G. N. PUTTANNA.—What species of wood are you using for sleepers ? Was not Doome, after curing, found to be suitable ? Why don't you use Mathi for house building purposes and Doome for sleepers ?

ಶ್ರೀ ಕೆ. ಎಫ್. ಪಾಟೀಲ್.—ಸ್ಲೀಪರುಗಳಿಗೆ ಮುತ್ತಿ ಮರ ಹೆಚ್ಚಾಗಿ ಉಪಯೋಗಿಸುತ್ತಿದೆ. ಅದಕ್ಕೆ ಯಾವ ಹಾರ್ಡ್‌ವುಡ್ ಆದರೂ ಪರವಾಗಿಲ್ಲ. 15-20 ಜಾತಿಯ ಮರಗಳು ಅದಕ್ಕೆ ಉಪಯೋಗವಾಗುತ್ತವೆ.

ಈ ರೀತಿ ಕ್ರಮಗಳನ್ನು ತೆಗೆದುಕೊಂಡು ಅರಣ್ಯವನ್ನು ಬೆಳಸುತ್ತಿದ್ದೇವೆ. ಮುಂದಿನ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಹ afforestation ಕೆಲಸವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಬೇಕೆಂದಿದ್ದೇವೆ.

ಶ್ರೀಮಾನ್ ವೀರೇಗೌಡರು ಗಿಡಗಳನ್ನು ಹಾಕಿ ನಡುವೆ ವ್ಯವಸಾಯಕ್ಕೆ ಕೊಡುವುದು ಒಳ್ಳೆಯದಲ್ಲವೆಂದು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಏನೂ ಕೊಡದೆ ಇರುವುದಕ್ಕಿಂತ ಈ ರೀತಿ ಕೊಡುವುದು ಉತ್ತಮವೆಂದು ನಾವೆಲ್ಲ ವರ್ಷ ವ್ಯವಸಾಯಕ್ಕೆ ಕೊಡೋಣವೆಂದು ಪ್ರಯೋಗ ಮಾಡುತ್ತಿದ್ದೇವೆ. General accepted policy ಯನ್ನು ಇಟ್ಟುಕೊಂಡು ಎಲ್ಲ ಕಡೆಗೂ ಈ ರೀತಿ ಕೊಡುತ್ತಿಲ್ಲವೆನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀಮಾನ್ ಪಂಡಿತರು ದೊಡ್ಡ ಪ್ಲಾಂಟೇಷನ್‌ಗಳನ್ನು ಮಾಡಲು seedling ಕೊಡಬೇಕೆಂದು ಹೇಳಿದರು. ಯಾರು ಹೆಚ್ಚಿನ ಪ್ರಮಾಣದಲ್ಲಿ ಅರಣ್ಯವನ್ನು ಬೆಳೆಸುತ್ತಾರೆ ಅಂಥವರಿಗೆ ಅರಣ್ಯ ಇಲಾಖೆಯಿಂದ ರಿಯಾಯಿತಿ ದರದಲ್ಲಿ seedlings ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀಮಾನ್ ಬಿ. ಎಲ್. ನಾರಾಯಣಸ್ವಾಮಿಯವರು ಬಹಳ ಕಟುವಾದ ಮಾತನ್ನು ಹೇಳಿದರು. Perhaps I deserve that comment. ಗಂಧದ ಮರವನ್ನು ಕಳ್ಳತನದಲ್ಲಿ ನಾಗಿಸುತ್ತ ಇದ್ದುದನ್ನು ಪತ್ತೆ ಹಚ್ಚಲು ಒಬ್ಬ ಗಾರ್ಡ್ ರಾತ್ರಿಯನ್ನು ಏರಿದ್ದಾಗ ಆತನನ್ನು ಕೆಳಗೆ ಉರುಳಿಸಿದ್ದರ ಪರಿಣಾಮವಾಗಿ ಆತ ಸತ್ತ. ಆತನ ಕುಟುಂಬಕ್ಕೆ ಪರಿಹಾರ ಕೊಡುವುದರಲ್ಲಿ ಸಾಕಷ್ಟು ನಿಗಾವಹಿಸುತ್ತಿಲ್ಲವೆಂದು ಆರೋಪ ಮಾಡಿದರು. ಆ ಪರಿಸ್ಥಿತಿ ಹೀಗಿದೆ.....

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಮೂರು ವರ್ಷಗಳಿಂದ ಹೇಳುತ್ತಿದ್ದಾರೆ. ಪರಿಹಾರ ನಿಮಗೆ ಇನ್ನೂ ಸಿಕ್ಕಿಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ಆತ ಮೂರು ತಿಂಗಳು ಮಾತ್ರ ಹಂಗಾಮಿಯಾಗಿ ಕೆಲಸ ಮಾಡಿದ್ದವನು. ರೂಲ್ಸ್ ಎಲ್ಲರಿಗೂ ಗೊತ್ತಿದೆ. ಮೂರು ನಾಲ್ಕು ನೂರು ರೂಪಾಯಿ ಆಗಿದ್ದರೆ ಕೊಡಬಹುದಾಗಿತ್ತು. ಆದರೆ ಹೆಚ್ಚಿನ ಪರಿಹಾರ ಕೊಡಬೇಕಾದರೆ ಯಾವ ರೂಲ್ ಪ್ರಕಾರವೂ ಕೊಡುವಹಾಗಿಲ್ಲದೆ, Department to Department ಹೋಗಿ ತಡವಾಗಿದೆ. ಈಗ ಹಣಕಾಸಿನ ಇಲಾಖೆಯಲ್ಲಿದೆ. ಅಲ್ಲಿಂದ ತರಿಸಿ ಇನ್ನು ಎಂಟು ದಿನಗಳಲ್ಲಿ ನಿಕಾಲೆ ಮಾಡಿ ಆಜ್ಞೆ ಹೊರಡಿಸುವುದರಲ್ಲಿದ್ದೇನೆ. ಮಾನ್ಯ ಸದಸ್ಯರೂ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡಲು ಕಾಲ ಹೆಚ್ಚಿಸಬೇಕೆಂದು ಅಧ್ಯಕ್ಷರನ್ನು ಕೇಳಿದ್ದೇನೆ. ಈ ಬಗ್ಗೆ ಆಜ್ಞೆ ಮಾಡಿ ಆ ವಿಚಾರವನ್ನು ತಿಳಿಸುವ ನಲುವಾಗಿ ಈ ರೀತಿ ಮಾಡಿದ್ದೇನೆ. Finance Department ನಿಂದ clearance ಬರುವ ನಲುವಾಗಿ ತಡೆದಿದ್ದೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾತ್ಕಾಲಿಕ ಪರಿಹಾರವನ್ನೇನಾದರೂ ಕೊಟ್ಟಿದ್ದೀರಾ ?

ಶ್ರೀ ಕೆ. ಎಫ್. ಪಾಟೀಲ್.—ಹಂಗಾಮಿ ಕೆಲಸದಲ್ಲಿದ್ದವನು ಸತ್ತುಹೋದದ್ದರಿಂದ ರೂಲ್ಸ್ ಪ್ರಕಾರ ಆ ರೀತಿ ಕೊಡಲು ಕಷ್ಟವಾಗಿರುವುದರಿಂದ ಸ್ಪೆಷಲ್ ಕೇಸ್ ಆಗಿ ಭಾವಿಸಿ lumpsum grant ಕೊಡಬೇಕೆಂದಿರುವುದರಿಂದ ತಡವಾಗಿದೆ.

Sri C. J. MUCKANNAPPA.—You were able to take a decision about giving Rs. 5000 to the widow and parents of the person who fell down from the hostel. Here, it is an official who was discharging the duty of the Government. He was a poor man. I want to know what your difficulties are in expediting the matter.

ಶ್ರೀ ಕೆ. ಎಫ್. ಪಾಟೀಲ್.—ಬೇಗ ನಿರ್ಣಯ ಮಾಡುತ್ತೇನೆ ಎಂದು ಹೇಳಿದ್ದೇನೆ.

ಮಾನ್ಯ ಶ್ರೀ ವಿ. ಎಸ್. ಪಾಟೀಲ್ ಅವರು ರಾಕ ಸ್ಕೋಪ್ ಜರಾಶಯದಿಂದ ಜಮೀನು ಮುಳುಗಡೆಯಾಗತಕ್ಕ ಜನಗಳಿಗೆ ಜಮೀನು ಕೊಡಬೇಕೆಂದು ಹೇಳಿದ್ದಾರೆ. ಅದನ್ನು ನಾವು ಪರಿಶೀಲನೆಯಲ್ಲಿಟ್ಟಿದ್ದೇವೆ. ಆ ಜಮೀನುಗಳೆಲ್ಲ ಮುಳುಗಡೆಯಾಗಲು ಒಂದೆರಡು ವರ್ಷಗಳಾಗುತ್ತವೆಂದು ಕಾಣುತ್ತದೆ. ಅವರು ಕೇಳಿರುವಂಥ ಜಮೀನು ಕೊಡಬೇಕಾದರೆ ಕಷ್ಟ. ಆದರೆ ಎಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನಿದೆಯೋ ಅದನ್ನು ಕೊಡುತ್ತೇವೆಂದು ಹೇಳಬಯಸುತ್ತೇನೆ.

Illegal cutting ತಡೆಯಬೇಕೆಂದು ಸಲಹೆಮಾಡಿದ್ದಾರೆ. ಅದನ್ನು ಲಕ್ಷ್ಯದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀಮತಿ ಚಂಪಾಬಾಯಿಯವರು ಖಾನಾಪುರ ತಾಲ್ಲೂಕಿನಲ್ಲಿ ಕೆಲವು ಪ್ರದೇಶವನ್ನು ಹರಿಜನರಿಗೆ ಸಹಕಾರಿ ಸಂಘದ ಮೂಲಕ ವ್ಯವಸಾಯಕ್ಕೆ ಕೊಡಬೇಕೆಂದು ಕೇಳಿದ್ದಾರೆ. ಅವೇ ಸ್ಥಳವನ್ನ ಜೀರೆ ಬೇರೆ ಸೊಸೈಟಿಯವರೂ ಕೇಳಿದ್ದಾರೆ. ಆದರಿಂದ ತಡವಾಗಿದೆ. ಮೂರು ತಿಂಗಳ ಕೆಳಗೆ ಅಲ್ಲಿಗೆ ಬರುತ್ತೇನೆಂದು ಅವರಿಗೆ ತಿಳಿಸಿದ್ದೆ. ಆದರೆ ನನಗೆ ಹೋಗಲು ಆಗಲಿಲ್ಲ. ಈ ಅಧಿವೇಶನ ಮುಗಿದ ಮೇಲೆ ಹೋಗಿ, ಆ ಪ್ರದೇಶ ವಲ್ಲದಿದ್ದರೆ ಬೇರೆ ಕಡೆಯಾದರೂ ಜಮೀನು ಕೊಟ್ಟು ಅವರ ಪ್ರಶ್ನೆಯನ್ನು ಬಗೆಹರಿಸಿ ಬರುತ್ತೇನೆಂದು ಹೇಳುತ್ತೇನೆ.

ಇಷ್ಟನ್ನು ಹೇಳಿ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಕ್ಕೆ ಅವರನ್ನು ಅಭಿನಂದಿಸಿ, ಈ ಬೇಡಿಕೆಯನ್ನು ಒಪ್ಪಬೇಕೆಂದು ಹೇಳುತ್ತೇನೆ.

Sri V. SRINIVAS SHETTY.—I mentioned something about giving out contracts in Malnad.

ಶ್ರೀ ಕೆ. ಎಫ್. ಪಾಟೀಲ್.—ದೊಡ್ಡ ಕಂಟ್ರಾಕ್ಟ್ ಎಂದು ಹೇಳುವಾಗ ಶರಾವತಿ ಯೋಜನೆಯಿಂದ ಮುಳುಗಡೆಯಾಗುವ ಪ್ರದೇಶವನ್ನು ಲಕ್ಷ್ಯದಲ್ಲಿಟ್ಟು ಕೊಂಡಿರ್ವಾರೆಂಬ ಕಲ್ಪನೆ ಬರುತ್ತದೆ. ಏನಾದರೂ ವಿಶಿಷ್ಟ ಪ್ರಸಂಗ ಬಂದು ದೊಡ್ಡ ಪ್ರದೇಶ ಮುಳುಗಡೆಯಾಗುವಹಾಗಿದ್ದರೆ ಆ ರೀತಿ ಕೊಟ್ಟಿರಬಹುದು. ಸಾಮಾನ್ಯವಾಗಿ ಸಣ್ಣ ಸಣ್ಣ ಕೂಪ್‌ಗಳನ್ನು ಮಾಡಿ ಕೊಡುತ್ತೇವೆ. ಅಲ್ಲದೆ ನಮ್ಮ ಅನುಭವದಲ್ಲಿ ತಂಗಡಿ ಚಕ್ಕೆಯನ್ನು districtwise ಕೊಟ್ಟರೆ ಕಡಮೆ ಹಣ ಬರುತ್ತದೆ, talukwise ಕೊಟ್ಟರೆ ಹೆಚ್ಚು ಬರುತ್ತದೆ, hobliwise ಕೊಟ್ಟರೆ ಇನ್ನೂ ಹೆಚ್ಚು ಬರುತ್ತದೆ. ಆ ಪ್ರಕಾರ ಬೇರೆ ಬೇರೆಯಾಗಿ ಸಣ್ಣ ಸಣ್ಣ ಭಾಗಗಳನ್ನು ಕೊಡುವುದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆಂಬುದನ್ನು ಸರ್ಕಾರ ಲಕ್ಷ್ಯದಲ್ಲಿಟ್ಟುಕೊಂಡಿದೆ. ಅನಿವಾರ್ಯ ಪರಿಸ್ಥಿತಿಯಲ್ಲಲ್ಲ, ಮುಳುಗಡೆಯಾಗತಕ್ಕ ಪ್ರದೇಶವನ್ನು clear ಮಾಡಬೇಕಾದರೆ ದೊಡ್ಡ ಪ್ರಮಾಣದಲ್ಲಿ ಯಾರು ಟೆಂಡರು ಹಾಕಿದರೋ ಅವರಿಗೆ ಕೊಡಬೇಕಾಯಿತು. ಇನ್ನು ಮೇಲೆ ಅಂಥ ಪರಿಸ್ಥಿತಿ ಬಂದರೆ ಬ್ಲಾಕ್‌ಗಳನ್ನು ಮಾಡಿ ಬೇರೆಬೇರೆಯಾಗಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜಿಲ್ಲೆಯಲ್ಲಿರುವ ಇಲಾಖಾಧಿಕಾರಿಗಳಿಗೆಲ್ಲ ವಾಹನ ಸೌಲಭ್ಯವನ್ನು ಕೊಡುತ್ತೀರಿ. ಅದೇ ರೀತಿ ಅರಣ್ಯ ಇಲಾಖೆಯವರಿಗೂ ವಾಹನ ಸೌಲಭ್ಯವನ್ನು ಕೊಡಬೇಕೆಂದು ಕಳೆದ ವರ್ಷ ನಾನು ಹೇಳಿದ್ದಕ್ಕೆ ಮುಂದಿನ ವರ್ಷ ಮಾಡುತ್ತೇವೆಂದು ಹೇಳಿದರು. ಈ ವಿಚಾರದಲ್ಲಿ ಏನು ಮಾಡಿದ್ದಾರೆ, ಈ ಇಲಾಖಾಧಿಕಾರಿಗಳು intensive ಆಗಿ ಕೆಲಸ ಮಾಡಲು ಅವರಿಗೆ ವಾಹನ ಸೌಲಭ್ಯವನ್ನು ಒದಗಿಸುವ ವಿಷಯವನ್ನು ತೀವ್ರವಾಗಿ ಯೋಚನೆ ಮಾಡುತ್ತಾರೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಅದನ್ನು ನಾನಾಗಲೇ ವಿಶದಪಡಿಸಿದ್ದೇನೆ. ಇವರಿಗೆ ಜೀಪ್ ಅವಶ್ಯವಿದೆ. ಈಗಾಗಲೇ ಐದಾರು ಡಿವಿಷನ್‌ಗಳಲ್ಲಿ ಜೀಪ್ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಎಲ್ಲ ಕಡೆಗೂ ವಾಹನಗಳನ್ನು ಕೊಡಲು ಎರಡು ಮೂರು ವರ್ಷಗಳಲ್ಲಿ ಪೂರೈಸಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಆರೋಗ್ಯ ಇಲಾಖೆಯಲ್ಲಿ ಬೇಕಾದಷ್ಟು ವಾಹನಗಳು ಬಿದ್ದಿವೆ. They are being wasted in most of the cases. ಆ ವಾಹನಗಳನ್ನು ತೆಗೆದುಕೊಂಡು ರಿಪೇರಿ ಮಾಡಿಸಿ ಕೊಟ್ಟರೆ ಅನುಕೂಲವಾಗುತ್ತದೆ. ತಕ್ಷಣ ಈ ರೀತಿ ಮಾಡದೆ ಇದ್ದರೆ heavy smuggling ತಪ್ಪಿಸುವುದಕ್ಕಾಗುವುದಿಲ್ಲ. It you prevent smuggling you will save a lot. ಮೂರು ತಿಂಗಳು ಕೆಲಸ ಮಾಡಿದವನು ಒಳ್ಳೆ ಕೆಲಸ ಮಾಡಲು ಹೋಗಿ ಪ್ರಾಣ ಬಿಟ್ಟ. ಅವನ ಕುಟುಂಬಕ್ಕೆ ಕೊಡಬೇಕಾದ ಪರಿಹಾರವನ್ನು ಬೇಗ ಕೊಡಬೇಕು. Let there be security and safety to the Government servants. Let them have an assurance that even if they die while on duty, their dependents will get protection from the Government.

Sri K. F. PATIL.—I welcome that suggestion.

Statement *re.* time taken by parties in the Budget Discussion.

Mr. SPEAKER.—Before we rise, I would like to make a statement in respect of the time taken by the party in power and others. This is a very important statement because some members are under the impression that I have given more time to certain people and less time to others. I have got a statement showing the time taken by the party in power, the P. S. P. and the Independents. The total number of participants in general discussion on the Budget is 45; out of them Congress Members are 24, P.S.P. Members are